

MAG(2) PRB/CR/70/2022-23 REG NO: KARKAN27951

# ಮುಂಜಾನೆ ವಾರ್ತೆ

ಇ-ಪೇಪರ್: www.munjaneevartheepaper.com

EDITOR: H.L.AMARANATH

MUNJANE VARTHE

ಸಂಪಾದಕ: ಹೆಚ್.ಎಲ್ ಅಮರನಾಥ್

ಕನ್ನಡ ದಿನಪತ್ರಿಕೆ



ಜಾಹೀರಾತಿಗಾಗಿ ಸಂಪರ್ಕಿಸಿ

9663122276

website: munjanevarthe.com



Volume: 02 Issue: 99 | ಸಂಪುಟ: 02 | ಸಂಚಿಕೆ: 99 | ಪುಟಗಳು: 04 | munjanevarthe | 24 FRIDAY MAY 2024 | 24 ಶುಕ್ರವಾರ ಮೇ 2024 | ₹ 2


ಪೆನ್ ಡ್ರೈವ್ ಪ್ರಕರಣ ವಿರೋಧಿಸಿ ಹಾಸನ ಚಲೋ ಕಾರ್ಯಕ್ರಮದ ಪೂರ್ವ ಭಾವಿ ಸಭೆ

ವಿವರಪುಟ 02

ವೈಭವಯುತವಾಗಿ ಜರುಗಿದ ಗೋವಿಂದ ರಾಧೋತ್ಸವ

ವಿವರಪುಟ 03

ಮಹತ್ವದ ಮೈಲಿಗಲ್ಲು ಸಾಧಿಸಿದ ವರ್ಕ್ ಇಂಡಿಯಾ

ವಿವರಪುಟ 04

ಚುನಾವಣಾ ಸಿದ್ಧತೆ ಜನವರಿಯಲ್ಲೇ ಶುರುವಾಗಿತ್ತು. ನೀತಿ ಸಂಹಿತೆ ಜೂನ್ 6ರ ವರೆಗೆ ಇದೆ. ಆದರೂ ತುರ್ತು ಕೆಲಸಗಳಿಗೆ ಗಮನ ನೀಡಬೇಕು. ಜಿಲ್ಲಾಮಟ್ಟದ ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡಬೇಕು. ಬಜೆಟ್ ಘೋಷಣೆಗಳಿಗೆ ಸಂಬಂಧಿಸಿದಂತೆ ಜೂನ್ ಕೊನೆಯ ವೇಳೆಗೆ ಆದೇಶ ಹೊರ ಬರಬೇಕು. ಕಾಮಗಾರಿಗಳಿಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆ ಕೂಡ ಶೀಘ್ರವಾಗಿ ಆಗಬೇಕು. ಚುನಾವಣೆ ಮುಗಿದಿದೆ, ನೀತಿ ಸಂಹಿತೆ ಸಡಿಲವಾಗಿದೆ. ಹೀಗಾಗಿ, ಅಧಿಕಾರಿಗಳು ಅಭಿವೃದ್ಧಿ ಕಡೆ ಹೆಚ್ಚಿನ ಗಮನಹರಿಸಬೇಕು ಎಂದು ಸಿಎಂ ಸೂಚಿಸಿದರು.

# ಅಧಿಕಾರಿಗಳಿಗೆ ಚಳಿ ಬಿಡಿಸಿದ ಸಿಎಂ ಸಿದ್ದು

ಬೆಂಗಳೂರು: ಬಜೆಟ್ ಘೋಷಣೆಗಳಿಗೆ ಸಂಬಂಧಿಸಿದಂತೆ ಜೂನ್ ಅಂತ್ಯದ ವೇಳೆಗೆ ಆದೇಶ ಹೊರಬರಬೇಕು. ಕಾಮಗಾರಿಗಳಿಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆ ಕೂಡ ಶೀಘ್ರವಾಗಿ ಆಗಬೇಕು ಎಂದು ಅಧಿಕಾರಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ರಾಜ್ಯದ ಯಾವುದೇ ಭಾಗದಲ್ಲಿ ಕಾಲರಾ ಅಥವಾ ಇನ್ನಿತರ ಸಾಂಕ್ರಾಮಿಕಗಳು ಕಂಡು ಬಂದರೆ ಸಂಬಂಧಿಸಿದ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡಿ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದ್ದಾರೆ.



ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬರ ಹಾಗೂ ಮುಂಗಾರು ಕೃಷಿ ಚಟುವಟಿಕೆ ಕುರಿತು ಎಲ್ಲ ಜಿಲ್ಲಾಧಿಕಾರಿಗಳು, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳೊಂದಿಗೆ ವಿಡಿಯೋ ಸಂವಾದ ನಡೆಸಿದರು. ಈ ವೇಳೆ ಅಧಿಕಾರಿಗಳೊಂದಿಗೆ ಆಯಾ ಜಿಲ್ಲೆಯ ಸ್ಥಿತಿಗತಿಯ ಮಾಹಿತಿ ಪಡೆದುಕೊಂಡು, ಅಗತ್ಯ ಸಲಹೆ ಸೂಚನೆ ನೀಡಿದರು.

ಅಭಿವೃದ್ಧಿ ಕಡೆ ಹೆಚ್ಚಿನ ಗಮನಹರಿಸಿ: ನಂತರ ಜಿಲ್ಲಾಡಳಿತಗಳನ್ನುದ್ದೇಶಿಸಿ ಮಾತನಾಡಿದ ಸಿಎಂ, ಈಗ ವಾಡಿಕೆಗಿಂತ ಅಧಿಕ ಮಳೆಯಾಗಿದೆ. ಕೃಷಿ ಚಟುವಟಿಕೆ ಆರಂಭವಾಗಿದೆ.

ಚುನಾವಣಾ ಸಿದ್ಧತೆ ಜನವರಿಯಲ್ಲೇ ಶುರುವಾಗಿತ್ತು. ನೀತಿ ಸಂಹಿತೆ ಜೂನ್ 6ರ ವರೆಗೆ ಇದೆ. ಆದರೂ ತುರ್ತು ಕೆಲಸಗಳಿಗೆ ಗಮನ ನೀಡಬೇಕು. ಜಿಲ್ಲಾಮಟ್ಟದ ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡಬೇಕು. ಬಜೆಟ್ ಘೋಷಣೆಗಳಿಗೆ ಸಂಬಂಧಿಸಿದಂತೆ ಜೂನ್ ಕೊನೆಯ ವೇಳೆಗೆ ಆದೇಶ ಹೊರ ಬರಬೇಕು. ಕಾಮಗಾರಿಗಳಿಗೆ ಸಂಬಂಧಿಸಿದ ಟೆಂಡರ್ ಪ್ರಕ್ರಿಯೆ ಕೂಡ ಶೀಘ್ರವಾಗಿ ಆಗಬೇಕು. ಚುನಾವಣೆ ಮುಗಿದಿದೆ, ನೀತಿ ಸಂಹಿತೆ ಸಡಿಲವಾಗಿದೆ. ಹೀಗಾಗಿ, ಅಧಿಕಾರಿಗಳು ಅಭಿವೃದ್ಧಿ ಕಡೆ ಹೆಚ್ಚಿನ ಗಮನಹರಿಸಬೇಕು ಎಂದು ಸಿಎಂ ಸೂಚಿಸಿದರು.

ಎಲ್ಲ ಜಿಲ್ಲಾಧಿಕಾರಿಗಳೂ ಚುನಾವಣಾಧಿಕಾರಿಗಳಾಗಿದ್ದರು. ಚುನಾವಣಾ ಕೆಲಸದಲ್ಲಿ ನಿರತರಾಗಿದ್ದರಿಂದ ಅಭಿವೃದ್ಧಿ ಕೆಲಸಗಳಿಗೆ ಆದ್ಯತೆ ನೀಡಲು ಸಾಧ್ಯವಾಗಿರಲಿಲ್ಲ. ಮೇ ತಿಂಗಳಲ್ಲಿ ವಾಡಿಕೆಗಿಂತ ಹೆಚ್ಚು ಮಳೆ ಆಗಿದೆ. ಬಿತ್ತನೆ ಕೆಲಸವೂ ಪ್ರಾರಂಭವಾಗಿದೆ. ಮೇ ತಿಂಗಳಲ್ಲಿ ಗುರಿ ಇರುವುದು 2.95 ಲಕ್ಷ ಹೆಕ್ಟೇರ್ ಪ್ರದೇಶ, ಆದರೆ 68,000 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆಯಾಗಿದೆ. ಇನ್ನೂ 13 ದಿನ ಬಾಕಿ ಇದೆ.

ಪೂರ್ವ ಮುಂಗಾರು ಮಳೆ ವಾಡಿಕೆಗಿಂತ ಹೆಚ್ಚಾಗಿದ್ದು, ಕೃಷಿ ಚಟುವಟಿಕೆಗೆ ಪೂರಕ ಕ್ರಮಕ್ಕೆ ಮುಂದಾಗಬೇಕು ಎಂದು ನಿರ್ದೇಶನ ನೀಡಿದರು.

ಎಲ್ಲ ಜಿಲ್ಲಾಧಿಕಾರಿಗಳು, ಜಿಲ್ಲಾಮಟ್ಟದ ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡಲು ಪ್ರಾರಂಭಿಸಬೇಕು. ಫೆಬ್ರವರಿಯಲ್ಲಿ ಬಜೆಟ್ ಮಂಡಿಸಲಾಗಿದೆ. ಆರ್ಥಿಕ ವರ್ಷದ ಎರಡು ತಿಂಗಳು ಕಳೆದು ಹೋಗುತ್ತಿದೆ. ಒಂದು ವರ್ಷದಲ್ಲಿ ಮಾಡುವ ಕೆಲಸವನ್ನು 10 ತಿಂಗಳಲ್ಲಿ ಮಾಡಿ ಮುಗಿಸುವ ಅನಿವಾರ್ಯತೆ ಇದೆ. ಈ ಹಿನ್ನೆಲೆಯಲ್ಲಿ ಎಲ್ಲ ಕಾರ್ಯದರ್ಶಿಗಳ ಸಭೆ ನಡೆಸಲಾಗಿದೆ ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಸಕಾಲದಲ್ಲಿ ರೈತರಿಗೆ ಸಾಲ ಸಿಗುವುದನ್ನು ಖಾತರಿಪಡಿಸಬೇಕು. ಈ ವರ್ಷದ ಸಾಲ ಯೋಜನೆ ಕಳುಹಿಸಲಾಗಿದೆ. ಜಿಲ್ಲಾ ಬ್ಯಾಂಕ್‌ಗಳೊಂದಿಗೆ ಸಮನ್ವಯ ವಹಿಸಿ, ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ. ಬರ ಪರಿಹಾರ ಮೊತ್ತವನ್ನು ರೈತರ ಸಾಲಕ್ಕೆ ವಜಾ ಮಾಡಿಕೊಳ್ಳದಂತೆ ಬ್ಯಾಂಕ್‌ಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಲಾಗಿದೆ. ಬೆಳೆ ವಿಮೆ ಕ್ಲೇಮ್ ಮಾಡುವ ಸಂದರ್ಭದಲ್ಲಿ ಕಂಪೆನಿಗಳ ಸ್ಯಾಂಪಲ್ ಪರಿಶೀಲನೆಯ ಕುರಿತು ರೈತರು ಹಲವು ಸಂದೇಹಗಳನ್ನು ಹೊಂದಿದ್ದಾರೆ. ಕಂಪನಿಗಳು ಆಡುವ ಆಟದಿಂದ ಸರ್ಕಾರಕ್ಕೆ ಕೆಟ್ಟ ಹೆಸರು ಬರುವ ಅಪಾಯವಿದೆ ಎನ್ನುವ ಸಲಹೆ ಸಚಿವ ಲಾಡ್ ಅವರಿಂದ ಬಂತು. ಇದಕ್ಕೆ ಪ್ರತಿಕ್ರಿಯಿಸಿದ ಸಿಎಂ, ಈ ಕುರಿತು ಮುಂಚಿತವಾಗಿಯೇ ವಿಮಾ ಕಂಪೆನಿಗಳೊಂದಿಗೆ ಚರ್ಚಿಸಿ, ರೈತರಿಗೆ ಅನುಕೂಲವಾಗುವಂತೆ ಕ್ರಮ ಕೈಗೊಳ್ಳಲು ಸೂಚಿಸಿದರು.

# ಗೃಹಸಚಿವರ ವಜಾಗೆ ಆಗ್ರಹ

ಬೆಂಗಳೂರು: ಅಧ್ಯಕ್ಷ, ಅಸಮರ್ಥ ಗೃಹ ಸಚಿವರನ್ನು ಕೂಡಲೇ ಸಚಿವಸಂಪುಟದಿಂದ ವಜಾ ಮಾಡಬೇಕೆಂದು ರಾಜ್ಯ ಬಿಜೆಪಿ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಅವರು ಮುಖ್ಯಮಂತ್ರಿಗಳನ್ನು ಆಗ್ರಹಿಸಿದರು.

ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯ ಜಗನ್ನಾಥ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾನ್ಯ ಗೃಹ ಸಚಿವರು ಈ ದೇಶ ಕಂಡ ಅಸಮರ್ಥ ಗೃಹ ಸಚಿವರಲ್ಲಿ ಮೊದಲಿಗರು. ಇವರ ಆಡಳಿತದಲ್ಲಿ ಇಷ್ಟೊಂದು ಕೊಲೆ ಪ್ರಕರಣ, ಅತ್ಯಾಚಾರ ಪ್ರಕರಣಗಳು ನಡೆದಿವೆ. ದರೋಡೆಗಳೂ ನಡೆಯುತ್ತಿದ್ದು, ಕಾನೂನು- ಸುವ್ಯವಸ್ಥೆ ಹದಗೆಟ್ಟಿದೆ. ಈ ಸರಕಾರ ಬಂದ ಬಳಿಕ ಪೊಲೀಸ್ ಇಲಾಖೆಯಿಂದ ಸರ್ಕ್ಯುಲರ್ ಅನ್ನುವುದೇ ಮರೆತುಹೋಗಿದೆ ಎಂದು ಟೀಕಿಸಿದರು.

ಹಿಂದೆ ರಾಜ್ಯದಲ್ಲಿ ಒಂದು ಅಪರಾಧ ಪ್ರಕರಣ ನಡೆದರೂ, ಎಲ್ಲೋ ಒಂದು ದರೋಡೆ, ಅತ್ಯಾಚಾರ ನಡೆದರೆ ಎಲ್ಲ ಪೊಲೀಸ್ ಠಾಣೆಗೆ ಸುತ್ತೋಲೆ ಕಳುಹಿಸಲಾಗುತ್ತಿತ್ತು. ತಾವು ಗಸ್ತನ್ನು ತೀವ್ರಗೊಳಿಸಬೇಕು; ಸಂಶಯಿತರನ್ನು ತಪಾಸಣೆಗೆ ಒಳಪಡಿಸಿ; ರೌಡಿಗಳ ಪರೇಡ್ ಮಾಡಬೇಕು ಎಂದು ಸುತ್ತೋಲೆ ಕಳಿಸುತ್ತಿದ್ದರು. ಹೊಸ ಸರಕಾರ ಬಂದ ಬಳಿಕ ಪೊಲೀಸ್ ಇಲಾಖೆಗೆ ಕ್ರಿಯಾಶೀಲವಾಗಲು ಒಂದೇ ಒಂದು ಸುತ್ತೋಲೆ ಬಂದಿಲ್ಲ ಎಂದು ಕಳವಳ ವ್ಯಕ್ತಪಡಿಸಿದರು. ಡಿಜಿಪಿಗೆ ಗೃಹ ಸಚಿವರೇ ಸೂಚನೆ ಕೊಡುತ್ತಿಲ್ಲ ಎಂದಾದಾಗ ಡಿಜಿ ಏನು ಮಾಡಲು ಸಾಧ್ಯ? ಎಂದು ಪ್ರಶ್ನಿಸಿದರು.

ಕಾಂಗ್ರೆಸ್ ಕಚೇರಿಯಾಗಿ ಪೊಲೀಸ್ ಠಾಣೆ..

ರಾಜ್ಯದಲ್ಲಿ ಪೊಲೀಸ್ ಠಾಣೆಗಳು ಕಾಂಗ್ರೆಸ್ಸಿನ ಕಚೇರಿಗಳಾಗಿ ಪರಿವರ್ತನೆ ಆಗುತ್ತಿವೆ ಎಂದು ಟೀಕಿಸಿದರು. ಒಬ್ಬ ಆರೋಪಿಯನ್ನು ದಸ್ತಗಿರಿ ಮಾಡಲು 3 ಕಾರಣಗಳು ಇರಬೇಕೆಂದು ಸುಪ್ರೀಂ ಕೋರ್ಟ್ ಬಹಳಷ್ಟು ಸಲ ಹೇಳಿದೆ. ಆರೋಪಿ ತಲೆ ಮರೆಸಿಕೊಳ್ಳುವ ವ್ಯಕ್ತಿ ಆಗಿದ್ದರೆ ಕೂಡಲೇ ಬಂಧಿಸಬೇಕು. ಆತ ಸಾಕ್ಷ್ಯ ನಾಶ ಮಾಡುವ ಅವಕಾಶಗಳಿದ್ದರೆ, ಇಲ್ಲವೇ ಫಿರ್ಯಾದಿದಾರ ಅಥವಾ ದೂರುದಾರನ ಮೇಲೆ ಪ್ರಭಾವ ಬೀರಿ ಆತನಿಗೆ ಅಪಾಯ ತಂದೊಡ್ಡುವ ಸ್ಥಿತಿ ಇದ್ದರೆ ಬಂಧಿಸಬೇಕು ಎಂದು ತಿಳಿಸಿದೆ ಎಂದು ಪಿ.ರಾಜೀವ್ ಅವರು ತಿಳಿಸಿದರು.

ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಅವರ ಪ್ರಕರಣದಲ್ಲಿ ಅವರು ತಲೆ ಮರೆಸಿಕೊಳ್ಳುವುದು, ಸಾಕ್ಷ್ಯ ನಾಶ ಮಾಡುವುದು ಇರಲಿಲ್ಲ. ಕೇವಲ ರಾಜಕೀಯ ಕಾರಣಕ್ಕೆ ಅವರನ್ನು ಬಂಧಿಸುವ ಉದ್ದೇಶದಿಂದ 70 ಜನ ಪೊಲೀಸರನ್ನು ಈ ಸರಕಾರ ಬಳಸಿಕೊಂಡಿದೆ ಎಂದು ಆಕ್ಷೇಪಿಸಿದರು.

ಹರೀಶ್ ಪೂಂಜ ಅವರು ಹಿಂದೆ ಬೇರೊಬ್ಬರು ಪ್ರತಿಭಟನಾ ಭಾಷಣದಲ್ಲಿ ಯಾವ ರೀತಿ ಉಲ್ಲೇಖಿಸಿದ್ದರು ಎಂದುದನ್ನು ಭಾಗಶಃ ಇಟ್ಟುಕೊಂಡು ಸುಳ್ಳು ಆರೋಪವನ್ನು ಅಥವಾ ತಪ್ಪು ಅಭಿಪ್ರಾಯ ಸೃಷ್ಟಿಸಲು ಷಡ್ಯಂತ್ರ ಮಾಡಿದ್ದಾರೆ. ಅವರಲ್ಲಿ ಯಾವುದೇ ರೀತಿಯ ಅಪರಾಧದ ಉದ್ದೇಶ ಇರಲಿಲ್ಲ ಎಂದು ಹೇಳಿದರು.

# ಬಿಬಿಎಂಪಿ ಚುನಾವಣೆಗೆ ಸಿದ್ಧತೆ..?

ಬೆಂಗಳೂರು: ಸೆಪ್ಟೆಂಬರ್ ಅಥವಾ ಅಕ್ಟೋಬರ್ ತಿಂಗಳಲ್ಲಿ ಬಿಬಿಎಂಪಿ ಚುನಾವಣೆ ನಡೆಸುವ ಬಗ್ಗೆ ಸಚಿವರಿಗೆ ಮುಖ್ಯಮಂತ್ರಿಗಳು ಮಾಹಿತಿ ನೀಡಿದ್ದಾರೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಡಿ.ಕೆ.ಸುರೇಶ್ ನಿವಾಸದಲ್ಲಿ ಸಚಿವರ ಡಿನ್ನರ್ ಮೀಟಿಂಗ್‌ನಲ್ಲಿ ಹಲವು ವಿಚಾರಗಳ ಕುರಿತು ಮಾಹಿತಿ ಹಂಚಿಕೊಂಡ ಸಿಎಂ ಹಾಗೂ ಡಿಸಿಎಂ, ಸೆಪ್ಟೆಂಬರ್ ಅಥವಾ ಅಕ್ಟೋಬರ್ ನಲ್ಲಿ ಬಿಬಿಎಂಪಿ ಚುನಾವಣೆ ನಡೆಸುವ ಬಗ್ಗೆ ಸಚಿವರಿಗೆ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ.

ಡಿಸೆಂಬರ್ ಸುಮಾರಿಗೆ ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿ ಚುನಾವಣೆ ನಡೆಸುವ ಬಗ್ಗೆಯೂ ಚರ್ಚೆ ನಡೆಸಿದ್ದಾರೆ.

ಜೊತೆಗೆ ಲೋಕಸಭಾ ಚುನಾವಣಾ ಫಲಿತಾಂಶದ ನಂತರ ಬೃಹತ್ ಗ್ಯಾರಂಟಿ ಸಮಾವೇಶ ನಡೆಸುವ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆದಿದೆ.




ಕನಿಷ್ಠ 10ಕ್ಕಿಂತ ಜಾಸ್ತಿ ಸ್ಥಾನ ಬಂದರೆ ಅದ್ಧೂರಿ ಸಮಾವೇಶಕ್ಕೆ ಪ್ಲ್ಯಾನ್ ಸಹ ಮಾಡಿದ್ದಾರೆ ಎನ್ನಲಾಗಿದೆ.

ಪೆನ್ ಡ್ರೈವ್ ಪ್ರಕರಣದಲ್ಲಿ ಮುಲಾಜಿಲ್ಲದೇ ಮಾತನಾಡುವ ಬಗ್ಗೆಯೂ ಚರ್ಚೆ ನಡೆದಿದ್ದು ಆರೋಪಿ ವಿರುದ್ಧ ಮಾತನಾಡಿ ಯಾವುದೇ ಸಂಕೋಚ ಬೇಡ. ಪ್ರಜ್ವಲ್ ರಾಜ್ಯಕ್ಕೆ ಬಂದ ನಂತರ ವಿಷಯ ಮತ್ತಷ್ಟು ಮಹತ್ವ ಪಡೆದುಕೊಳ್ಳಲಿದೆ.

ಇದು ಸರ್ಕಾರ ಹಾಗೂ ಆಡಳಿತ ಪಕ್ಷ ಎರಡಕ್ಕೂ ಸವಾಲಿನ ವಿಚಾರ. ಪೆನ್ ಡ್ರೈವ್ ಆರೋಪಿ ಬಗ್ಗೆ ಮಾತನಾಡುವಾಗ ಯಾವುದೇ ಮುಲಾಜು ಬೇಡ ಎಂಬ ಸಂದೇಶ ನೀಡಿದ್ದಾರೆ ಎಂದು ಪಕ್ಷದ ಮೂಲಗಳಿಂದ ತಿಳಿದುಬಂದಿದೆ.

ಲೋಕಸಭೆ ಚುನಾವಣೆ ಬಳಿಕ ಸಚಿವರ ಬದಲಾವಣೆ ಏನೇ ಇದ್ದರೂ ಹೈಕಮಾಂಡ್ ತೀರ್ಮಾನ ಮಾಡುತ್ತದೆ.

ನಮ್ಮ ಮಟ್ಟದಲ್ಲಿ ಅದು ಇಲ್ಲ. ಹೈಕಮಾಂಡ್ ಮನಸ್ಸು ಮಾಡಿದರೇ ಏನು ಬೇಕಾದರೂ ಆಗಬಹುದು. ಎಲ್ಲದಕ್ಕೂ ಸಿದ್ಧವಿರಿ ಎಂಬ ಸಂದೇಶವನ್ನು ಸಿಎಂ ಹಾಗೂ ಡಿಸಿಎಂ ರವಾನಿಸಿದ್ದಾರೆ ಎಂದು ತಿಳಿದುಬಂದಿದೆ.



ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೈಸೂರು ಯರಗನಹಳ್ಳಿಯಲ್ಲಿ ಅನಿಲ ಸೋರಿಕೆಯಿಂದ ಸಂಭವಿಸಿದ ಅನಾಹುತದಲ್ಲಿ ಇಡೀ ಕುಟುಂಬ ಮೃತಪಟ್ಟ ಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಮೃತರ ಸಂಬಂಧಿಗಳಿಗೆ ಸಾಂತ್ವನ ಹೇಳಿ ಮೃತ ಕುಟುಂಬಕ್ಕೆ ಸಂತಾಪ ಸಲ್ಲಿಸಿದರು. ಸ್ಥಳದಲ್ಲೇ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿ ಮೃತರಿಗೆ ತಲಾ 3 ಲಕ್ಷ ರೂ.ನಂತೆ ಕುಟುಂಬಕ್ಕೆ 12 ಲಕ್ಷ ರೂ ಪರಿಹಾರ ಘೋಷಿಸಿದರು.

# ನಟ-ನಟಿಯರ ಡ್ರಗ್ಸ್ ವರದಿ ಪಾಸಿಟಿವ್

ಬೆಂಗಳೂರು: ಇತ್ತೀಚೆಗೆ ಬೆಂಗಳೂರು ಹೊರ ವಲಯದ ಫಾರ್ಮ್‌ಹೌಸ್‌ನಲ್ಲಿ ನಡೆದ ರೇವ್ ಪಾರ್ಟಿಯಲ್ಲಿ ಭಾಗವಹಿಸಿದ್ದವರ ರಕ್ತದ ಮಾದರಿಗಳ ಫಲಿತಾಂಶ ಬಂದಿದ್ದು, ತೆಲುಗು ಚಿತ್ರರಂಗದ ನಟಿ ಸೇರಿದಂತೆ 86 ಮಂದಿ ಮಾದಕ ದ್ರವ್ಯ ಸೇವಿಸಿರುವುದು ದೃಢಪಟ್ಟಿದೆ ಎಂದು ಪೊಲೀಸ್ ಮೂಲಗಳು ಗುರುವಾರ ತಿಳಿಸಿವೆ.

ಮೂಲಗಳ ಪ್ರಕಾರ ಬರ್ತ್ ಡೇ ಪಾರ್ಟಿ ನೆಪದಲ್ಲಿ ಆಯೋಜಿಸಲಾಗಿದ್ದ ರೇವ್ ಪಾರ್ಟಿಯಲ್ಲಿ ಒಟ್ಟು 103 ಮಂದಿ ಪಾಲ್ಗೊಂಡಿದ್ದರು. ಭಾಗವಹಿಸಿದವರಲ್ಲಿ 73 ಪುರುಷರು ಮತ್ತು 30 ಮಹಿಳೆಯರು ಸೇರಿದ್ದಾರೆ.

ಮೇ 19 ರಂದು ಬೆಳ್ಳಂಬೆಳಗ್ಗೆ ಎಲೆಕ್ಟ್ರಾನಿಕ್ ಸಿಟಿ ಬಳಿಯ ಫಾರ್ಮ್‌ಹೌಸ್‌ನಲ್ಲಿ ದಾಳಿ ನಡೆಸಿದ ಪೊಲೀಸರು 1.5 ಕೋಟಿ ಮೌಲ್ಯದ ಮಾತ್ರೆಗಳು, ಹೈಡ್ರೋ ಗಾಂಜಾ, ಕೊಕೇನ್, ಹೈ ಎಂಡ್ ಕಾರುಗಳು, ಉಪಕರಣಗಳು, ಧ್ವನಿ ಮತ್ತು ಬೆಳಕು ಉಪಕರಣಗಳು ಸೇರಿದಂತೆ 1.5 ಕೋಟಿ ರೂ ಮೌಲ್ಯದ ವಸ್ತುಗಳನ್ನು ವಶಕ್ಕೆ ಪಡೆದಿದ್ದರು.

ದಾಳಿಯ ನಂತರ, ಪೊಲೀಸರು ಖಾಸಗಿ ಆಸ್ಪತ್ರೆಯಲ್ಲಿ ಭಾಗವಹಿಸಿದವರ ರಕ್ತದ ಮಾದರಿಗಳನ್ನು ಸಂಗ್ರಹಿಸಿದರು, ಇದರಲ್ಲಿ 59 ಪುರುಷರು ಮತ್ತು 27 ಮಹಿಳೆಯರು ಮಾದಕ ದ್ರವ್ಯ ಪರೀಕ್ಷಾ ಫಲಿತಾಂಶ ಪಾಸಿಟಿವ್ ಬಂದಿದ್ದು, ಅವರು ಮಾದಕ ವಸ್ತು ಸೇವಿಸಿದ್ದಾರೆ ಎಂದು ದೃಢಪಟ್ಟಿದೆ ಎಂದು ತಿಳಿದುಬಂದಿದೆ.


ಮುಂಜಾನೆ ವಾರ್ತೆ ಕನ್ನಡ ದಿನಪತ್ರಿಕೆ ಓದುವುದು ಈಗ ಮತ್ತಷ್ಟು ಸುಲಭ

ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು ಮುಂಜಾನೆವಾರ್ತೆ ಓದಿ...

www.munjaneevartheepaper.com

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ–ಪೇಪರ್: www.munjaneevartheepaper.com
24 FRIDAY MAY 2024
24 ಶುಕ್ರವಾರ ಮೇ 2024

# ಜಿಲ್ಲೆಯಲ್ಲಿ ಪೂರ್ವ ಮುಂಗಾರು ಮಳೆ ಆರಂಭ : ಜನ-ಜಾನುವಾರು ಹಾನಿ ತಡೆಯಲು ಅಗತ್ಯ ಮುನ್ನೆಚ್ಚರಿಕೆ ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಸೂಚನೆ

ಚಾಮರಾಜನಗರ, ಮೇ 23 (ಕರ್ನಾಟಕ ವಾರ್ತೆ):– ಜಿಲ್ಲೆಯಾದ್ಯಂತ ಪೂರ್ವ ಮುಂಗಾರು ಮಳೆ ಆರಂಭಗೊಂಡಿದ್ದು, ಜಿಲ್ಲೆಯಲ್ಲಿ ಮಳೆಯಿಂದ ಸಂಭವಿಸಬಹುದಾದ ಯಾವುದೇ ಜನ–ಜಾನುವಾರು ಹಾನಿಯನ್ನು ತಪ್ಪಿಸಲು ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಕೆಸ್ವಾನ್ ಸಭಾಂಗಣದಲ್ಲಿಂದು ಜಿಲ್ಲೆಯ ಬರ ಪರಿಸ್ಥಿತಿ ಮತ್ತು ಮಾನ್ಸೂನ್ ನಿರ್ವಹಣೆ ಸಂಬಂಧ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ಕಳೆದ ಒಂದು ವಾರದಿಂದ ಸತತವಾಗಿ ಮಳೆಯಾಗುತ್ತಿದ್ದು, ಈ ಬಾರಿ ವಾಡಿಕೆಗಿಂತ ಅಧಿಕ ಮಳೆಯಾಗಿದೆ. ತೀವ್ರ ಮಳೆಯಿಂದ ಆಗಬಹುದಾದ ಅನಾಹುತಗಳನ್ನು ತಡೆಗಟ್ಟಲು ಜಿಲ್ಲಾಮಟ್ಟದ ಅಧಿಕಾರಿಗಳು ಕಾರ್ಯಪ್ರವೃತ್ತರಾಗಬೇಕು. ಜಿಲ್ಲೆಯ ಎಲ್ಲಾ ನಗರಸಭೆ, ಪುರಸಭೆ, ಪಟ್ಟಣ ಪಂಚಾಯಿತಿಗಳು ಈ ನಿಟ್ಟಿನಲ್ಲಿ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು. ಮಳೆಯಿಂದ ಉಂಟಾಗುವ ಜೀವಹಾನಿ ತಡೆಯಲು ಯಾವುದೇ ಕ್ಷಣದಲ್ಲಿ ಸನ್ನದ್ಧರಾಗಿರುವಂತೆ ಜಿಲ್ಲಾಧಿಕಾರಿಯವರು ನಿರ್ದೇಶನ ನೀಡಿದರು.

ಮನೆಹಾನಿ ಮತ್ತು ಗುಡುಗು ಸಿಡಿಲಿನಿಂದ ಜನ–ಜಾನುವಾರು ಹಾನಿ ತಡೆಯಲು ಎಲ್ಲಾ ಅಧಿಕಾರಿಗಳು ಕ್ಷೇತ್ರಪ್ರವಾಸ ಮಾಡಬೇಕು.



ಈ ಸಂಬಂಧ ಯಾವುದೇ ಸಮಸ್ಯೆಗಳು ಮಾಧ್ಯಮಗಳಲ್ಲಿ ವರದಿಯಾಗುವ ಮೊದಲೇ ಅವುಗಳನ್ನು ಪರಿಹರಿಸಲು ಅಧಿಕಾರಿಗಳು ಮುಂದಾಗಬೇಕು. ಜಿಲ್ಲೆಯ ಯಾವುದೇ ಭಾಗದಲ್ಲಿ ಪ್ರಕೃತಿ ವಿಕೋಪ ಉಂಟಾದರೂ ಅದನ್ನು ತ್ವರಿತವಾಗಿ ನಿಭಾಯಿಸಲು ತಕ್ಷಣವೇ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ಪ್ರಾಣಹಾನಿ ಸಂಭವಿಸಿದರೆ ಪರಿಹಾರ ವಿತರಣೆಯಲ್ಲಿ ವಿಳಂಬವಾಗದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದರು.

ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಸಮರ್ಪಕವಾಗಿ ಸರಬರಾಜು ಮಾಡಬೇಕು. ಈ ಬಾರಿ ಹೆಚ್ಚಿನ ಮಳೆಯಾಗುವ ಮುನ್ಸೂಚನೆ ಇದೆ. ಮಳೆನೀರು ಕಲುಷಿತಗೊಳ್ಳದಂತೆ ಗಮನ ಹರಿಸಬೇಕು. ಕುಡಿಯುವ ನೀರಿನ ಪೈ□□ಲೈ□□ಗೆ ಮಣ್ಣು ಹಾಗೂ ಯುಜಿಡಿ ನೀರು ಸೇರಿ ಆರೋಗ್ಯ ಸಮಸ್ಯೆಗಳಾಗದಂತೆ ಎಚ್ಚರ ವಹಿಸಬೇಕು. ಕುಡಿಯುವ ನೀರು ಪರಿಶುದ್ದವಾಗಿಬೇಕು. ಈ ಸಂಬಂಧ ಎಲ್ಲಾ ತಾಲೂಕುಗಳ ತಹಶೀಲ್ದಾರರು, ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಬೇಕು. ತಪ್ಪಿದ್ದಲ್ಲಿ ಗಂಭೀರವಾಗಿ ಪರಿಗಣಿಸಲಾಗುವುದು ಎಂದರು.

ಜಿಲ್ಲೆಯಲ್ಲಿ ವಾರದಿಂದೀಚೆಗೆ ತೀವ್ರಗೊಂಡಿರುವ ಮಳೆ–ಗಾಳಿಯಿಂದ ಸಾಕಷ್ಟು ಕೃಷಿ ಹಾಗೂ ತೋಟಗಾರಿಕೆ ಬೆಳೆ ಹಾನಿಯಾಗಿದೆ. ಅದರಲ್ಲೂ 980 ಹೆಕ್ಟೇ□□ಗೂ ಹೆಚ್ಚು ಪ್ರದೇಶದಲ್ಲಿ ಬಾಳೆ ಬೆಳೆಹಾನಿ ಕಂಡುಬಂದಿದ್ದು, ಅಧಿಕಾರಿಗಳು ತಕ್ಷಣವೇ ಕ್ಷೇತ್ರಪ್ರವಾಸ ಕೈಗೊಂಡು ಸ್ಥಳ ಮಹಜರು ಮಾಡಿ ರೈತರಿಗೆ ಪರಿಹಾರ ವಿತರಣೆ ಮಾಡಬೇಕು. ರೈತರಿಂದ ಯಾವುದೇ ದೂರುಗಳು ಬರದಂತೆ ಅಧಿಕಾರಿಗಳು ಕ್ರಿಯಾಶೀಲರಾಗಬೇಕು. ಜನರ ನಂಬಿಕೆ, ವಿಶ್ವಾಸ ಗಳಿಸಬೇಕು ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಜಿಲ್ಲೆಯ ವಿವಿಧ ಭಾಗಗಳಲ್ಲಿ ಅತಿಹೆಚ್ಚು ಮಳೆಯಾಗುತ್ತಿರುವುದು ವರದಿಯಾಗುತ್ತಿದ್ದು, ವಿದ್ಯುತ್ ಅವಘಡ ಉಂಟಾಗದಂತೆ ನಿಗಾವಹಿಸಬೇಕು. ಸಾರ್ವಜನಿಕರು ವಿದ್ಯು□□ಗೆ ಸಂಬಂಧಿಸಿದಂತೆ ದೂರುಗಳಿಗೆ ಕರೆ ಮಾಡಿದಲ್ಲಿ ತಕ್ಷಣವೇ ಸ್ಪಂದಿಸಬೇಕು. ಅಧಿಕ ಮಳೆಗಾಳಿಯಿಂದ ರಸ್ತೆಗಳಲ್ಲಿ ವಿದ್ಯುತ್ ತಂತಿ ಬಿದ್ದ ಸಂದರ್ಭದಲ್ಲಿ ಸಾರ್ವಜನಿಕರಿಗೆ ತೊಂದರೆಗಳಾಗದಂತೆ ಅಧಿಕಾರಿಗಳು ಸ್ಥಳದಲ್ಲಿದ್ದು, ಸಮಸ್ಯೆ ಬಗೆಹರಿಸಬೇಕು ಎಂದು ಜಿಲ್ಲಾಧಿಕಾರಿಯವರು ಚೆಸ್ಕಾಂ ಅಧಿಕಾರಿಗಳಿಗೆ ಸೂಚಿಸಿದರು.

ಹೆಚ್ಚಿನ ಮಳೆಯಿಂದ ರಸ್ತೆಯಲ್ಲಿ ಉಂಟಾಗುವ ಗುಂಡಿಗಳನ್ನು ಶೀಘ್ರವಾಗಿ ಮುಚ್ಚುವ ಕೆಲಸ ಆಗಬೇಕು. ಇದರಿಂದ ಅಪಘಾತಗಳು ಕಡಿಮೆಯಾಗಿ ವಾಹನ ಸವಾರರಿಗೆ ಅನುಕೂಲವಾಗವಾಲಿದೆ. ನಗರದಲ್ಲಿ ಮಳೆ ನೀರು ಸರಾಗವಾಗಿ ಹರಿದು ಹೋಗಲು ರಾಜಕಾಲುವೆ ಹಾಗೂ ಇತರೆ ಚರಂಡಿ ಮಾರ್ಗಗಳನ್ನು ಸ್ವಚ್ಛಗೊಳಿಸಲು ಕೂಡಲೆ ಕ್ರಮವಹಿಸಬೇಕು. ಕಟ್ಟಿಕೊಂಡಿರುವ ಚರಂಡಿಗಳಲ್ಲಿ ಹೂಳೆತ್ತಿಸಿ ಸ್ವಚ್ಛಗೊಳಿಸಬೇಕು. ಮಳೆ ವೇಳೆ ಕೆರೆಗಳಲ್ಲಿನ ನೀರು ರಸ್ತೆಗೆ ಬರುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕೆರೆಗಳಲ್ಲಿ ಹೂಳೆತ್ತುವ ಕಾರ್ಯ ಶೀಘ್ರವಾಗಿ ಆಗಬೇಕು ಎಂದರು.

ಅಧಿಕ ಮಳೆಯಿಂದ ಜಿಲ್ಲೆಯಲ್ಲಿರುವ ಕ್ವಾರಿಗಳಲ್ಲಿ ನೀರು ನಿಲ್ಲುವುದರಿಂದ ಯಾವುದೇ ಅವಘಡಗಳು ಜರುಗದಂತೆ ನೋಡಿಕೊಳ್ಳಬೇಕು. ಈ ಸಮಯದಲ್ಲಿ ಜನರು ಕ್ವಾರಿಯ ಸುತ್ತ ಓಡಾಡದಂತೆ ಫೆನ್ಸಿಂಗ್ ಮಾಡುವ ಕಾರ್ಯ ತ್ವರಿತಗತಿಯಲ್ಲಿ ಆಗಬೇಕು. ಈ ಸಂಬಂಧ ಸಂಬಂಧಪಟ್ಟ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕಾರಿಗಳು ಕ್ವಾರಿಗಳ ಉಸ್ತುವಾರಿಗೆ ತಾಲೂಕು ಮಟ್ಟದ ನೋಡಲ್ ಅಧಿಕಾರಿಗಳನ್ನು ನೇಮಿಸಬೇಕು ಎಂದು ಜಿಲ್ಲಾಧಿಕಾರಿಯವರು ತಿಳಿಸಿದರು.

ಮಳೆಯಿಂದ ಉಂಟಾಗುವ ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸಲು ಮುತುವರ್ಜಿ ವಹಿಬೇಕು. ಪ್ರವಾಹ ಉಂಟಾದರೆ ಕಾಳಜಿ ಕೇಂದ್ರಗಳನ್ನು ತೆರೆದು ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸುವ ಕೆಲಸವಾಗಬೇಕು. ಜಿಲ್ಲೆಯಲ್ಲಿರುವ ಎಲ್ಲಾ ಕೆರೆಗಳ ಹೂಳು ತೆಗೆಸಲು ಸಂಬಂಧಪಟ್ಟ ಅಧಿಕಾರಿಗಳು ಮುಂದಾಗಬೇಕು ಎಂದ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಅವರು ಸಭೆಯಲ್ಲಿ ವಿವಿಧ ಇಲಾಖೆಗಳಿಗೆ ಸಂಬಂಧಿಸಿದಂತೆ ಹಲವು ಸಮನ್ವಯ ವಿಷಯಗಳ ಕುರಿತು ಚರ್ಚೆ ನಡೆಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಆನಂದ್ ಪ್ರಕಾಶ್ ಮೀನಾ, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ, ಎಲ್ಲಾ ತಾಲೂಕು ತಹಶೀಲ್ದಾರರು, ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾಮಟ್ಟದ ಅಧಿಕಾರಿಗಳು, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.



# ಬಿಗ್ ಬಾಸ್ ಸ್ಪರ್ಧಿ ಹಳ್ಳಿಕಾರ್ ಒಡೆಯ ವರ್ತೂರ್ ಸಂತೋಷ್ ಭಾಗಿ ಜಾತ್ರೆ ಭಾಗಿ

ಗುಂಡ್ಲುಪೇಟೆ :ತಾಲೂಕಿನ ಕಂದೇಗಾಲದ ಸ್ಕಂದಗಿರಿ ಪಾರ್ವತಾಂಭ ರಥೋತ್ಸವವು ಗ ವೈಭವದಿಂದ ನಡೆದಿದ್ದು, ಜಾತ್ರೆಗೆ ವಿಶೇಷ ಅತಿಥಿಯಾಗಿ ಬಿಗ್ ಬಾಸ್ ಸ್ಪರ್ಧಿ ಹಳ್ಳಿಕಾರ್ ಒಡೆಯ ವರ್ತೂರ್ ಸಂತೋಷ್ ಭಾಗಿಯಾಗಿ ಗಮನ ಸೆಳೆದರು. ಪುರಾಣ ಪ್ರಸಿದ್ಧ ಕ್ಷೇತ್ರವಾಗಿರುವ ಪಾರ್ವತಿ ಬೆಟ್ಟದಲ್ಲಿ ವರ್ಷಕ್ಕೊಮ್ಮೆ ನಡೆಯುವ ರಥೋತ್ಸವಕ್ಕೆ ದೇವಸ್ಥಾನ ಮುಜರಾಯಿ ಇಲಾಖೆ ವ್ಯಾಪ್ತಿಗೆ ಒಳಪಡುವ ಹಿನ್ನೆಲೆ, ತಾಲೂಕು ಆಡಳಿತದಿಂದ ಸಕಲ ಸಿದ್ಧತೆ ಕೈಗೊಳ್ಳಲಾಗಿತ್ತು. ಕಳೆದ ಎರಡು ವರ್ಷದ ಹಿಂದೆ ರಥೋತ್ಸವದ ಸಂದರ್ಭದಲ್ಲಿ ಚಕ್ರಕ್ಕೆ ಸಿಲುಕಿ ಕಂದೇಗಾಲ ಗ್ರಾಮದ ಸರ್ಪಭೂಷಣ್ ಹಾಗೂ ಕಬ್ಬಹಳ್ಳಿ ಗ್ರಾಮದ ಸ್ವಾಮಿ ಎಂಬ ಇಬ್ಬರು ಯುವಕರು ಮೃತ ಪಟ್ಟಿದ್ದರಿಂದ ಜಿಲ್ಲಾಡಳಿತವು ರಥೋತ್ಸವದ ವೇಳೆ ಯಾವುದೇ ಅಹಿತರಕರ ಘಟನೆ ಜರುಗದಂತೆ ಸೂಕ್ತ ಪೊಲೀಸ್ ಬಂದೋಬಸ್ತ್ ಒಗದಿಸಿತ್ತು ರಥೋತ್ಸವಕ್ಕೆ ಗುಂಡ್ಲುಪೇಟೆ ತಾಲೂಕಿನ ಕಂದೇಗಾಲ, ಶಿಂಡನಪುರ, ಕೊಡಸೋಗೆ, ಸೋಮನಪುರ, ಬೊಮ್ಮಲಾಪುರ, ತೆರಕಣಾಂಬಿ ಸೇರಿದಂತೆ ನೆರೆ ಜಿಲ್ಲೆಗಳಿಂದಲೂ ಸಾವಿರಾರು ಮಂದಿ ಭಕ್ತರು ಆಗಮಿಸಿದ್ದರು.

# ಗೌರಿಬಿದನೂರು ರಸ್ತೆಯ ಸಮೀಪವಿರುವ ಎಸ್.ಎಂ. ಐ. ಡಿ ಫೌಂಡೇಶನ್‌ನ ಆವರಣ

ಮಧುಗಿರಿ : ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿರುವ ಜಿ. ಚಂದ್ರಶೇಖರಗೌಡ ರವರಿಗೆ ರಾಜ್ಯ ಕಾಂಗ್ರೆಸ್ ಸರ್ಕಾರದಲ್ಲಿ ಗೌರವ ಸ್ಥಾನಮಾನವನ್ನು ನೀಡುವಂತೆ ಮಧುಗಿರಿ ತಾಲೂಕಿನ ಕಾಂಗ್ರೆಸ್ ಮುಖಂಡರು ಪಕ್ಷದ ವರಿಷ್ಠರಲ್ಲಿ ಮನವಿ ಮಾಡಿದ್ದಾರೆ. ಪಟ್ಟಣದ ಗೌರಿಬಿದನೂರು ರಸ್ತೆಯ ಸಮೀಪವಿರುವ ಎಸ್. ಎಂ. ಐ. ಡಿ ಫೌಂಡೇಶನ್ ನ ಆವರಣದಲ್ಲಿ ಆಯೋಜಿಸಲಾಗಿದ್ದ ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಮುಖಂಡರು ಭಾಗವಹಿಸಿ ಮಾತನಾಡಿದರು , ಕೆಪಿಸಿಸಿ ಸದಸ್ಯ ಸಿದ್ದಾಪುರ ರಂಗಾಶ್ಯಾಮಣ್ಣ ಮಾತನಾಡಿ



ಹಿಂದುಳಿದ ವರ್ಗವಾದ ಕಾಡುಗೊಲ್ಲ ಜನಾಂಗಕ್ಕೆ ಸೇರಿದ ಚಂದ್ರಶೇಖರಗೌಡರವರಿಗೆ ಇಲ್ಲಿಯವರೆಗೂ ಉನ್ನತ ಸ್ಥಾನ ಘೋಷಣೆಯಾಗದಿರುವುದು ಜಿಲ್ಲೆಯ ಕಾಂಗ್ರೆಸ್ಸಿಗರಿಗೆ ಬೇಸರದ ಸಂಗತಿಯಾಗಿದೆ.

ಗೌಡರು ಬಿ.ಎ., ಎಲ್.ಎಲ್.ಬಿ. ವ್ಯಾಸಂಗ ಮಾಡಿದ್ದು, 1997 ರಲ್ಲಿ ಕಾಂಗ್ರೆಸ್ ಪ್ರವೇಶಿಸಿ, ಪಕ್ಷಕ್ಕಾಗಿ ದುಡಿಯುತ್ತಿದ್ದಾರೆ. 2014 ರಲ್ಲಿ ಜಯಮ್ಮ ಬಾಲರಾಜುರವರನ್ನು ಹೊರತುಪಡಿಸಿ, ಇಲ್ಲಿಯವರೆಗೂ ಗೊಲ್ಲಜನಾಂಗದ ಯಾವುದೇ ಶಾಸಕರಾಗಲಿ, ಸಂಸದರಾಗಲಿ, ವಿಧಾನ ಪರಿಷತ್ ಸದಸ್ಯರಾಗಲಿ ಇರುವುದಿಲ್ಲ.ಜಿಲ್ಲಾ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿರುವ ಇವರನ್ನು ಈ ಹಿಂದೆ ಓಬಿಸಿ ಜಿಲ್ಲಾ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿತ್ತು.

ಜಿಲ್ಲಾ ಗೊಲ್ಲ ಜನಾಂಗದ ಮುಖಂಡರಾಗಿದ್ದಾರೆ. ಬೆಂಗಳೂರು ವಿಶ್ವವಿದ್ಯಾಲಯ ಸೆನೆಟ್ ನಿರ್ದೇಶಕರಾಗಿದ್ದರು ಹಾಗೂ ಕೆ.ಎಂ. ಎಫ್, ನಿರ್ದೇಶಕರಾಗಿಯೂ, ಸೇವೆ ಸಲ್ಲಿಸಿರುವ ಇವರನ್ನು ಕಳೆದ 2022ರ ನವೆಂಬರ್ ತಿಂಗಳಲ್ಲಿ ತುಮಕೂರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದ್ದು ಕಾಂಗ್ರೆಸ್ ಪಕ್ಷದ ವರಿಷ್ಠರು ಇವರ ಸೇವೆಯನ್ನು ಪರಿಗಣಿಸಿ ರಾಜ್ಯದಲ್ಲಿ ಉನ್ನತ ಸ್ಥಾನವನ್ನು ನೀಡುವಂತೆ ಮನವಿ ಮಾಡಿದ್ದಾರೆ.

ಮೂಡ್ಲಗಿರೀಶ್ ಮಾತನಾಡಿ ನಮ್ಮ ಸಮುದಾಯದ ಜಿಲ್ಲಾ ಮುಖಂಡರಾಗಿರುವ ಚಂದ್ರಶೇಖರ್ ಗೌಡ ರವರು ಜಿಲ್ಲಾ ಕೆಪಿಸಿಸಿ ಅಧ್ಯಕ್ಷರಾಗಿ ಅಧಿಕಾರ ಸ್ವೀಕರಿಸಿದ ಕೇವಲ 4 ತಿಂಗಳಲ್ಲಿಯೇ ಜಿಲ್ಲಾ ಪೂರ್ತಿ ಪ್ರವಾಸ ಮಾಡಿ ಕಾರ್ಯಕರ್ತರನ್ನು ಮುಖಂಡರುಗಳನ್ನು ಸಂಘಟಿಸಿ, 2023ರ ವಿಧಾನಸಭಾ ಕ್ಷೇತ್ರ ಚುನಾವಣೆಯಲ್ಲಿ ಏಳು ಕ್ಷೇತ್ರಗಳಲ್ಲಿ ಪಕ್ಷವು ಜಯಗಳಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ 10 ಲಕ್ಷ ಗೊಲ್ಲರಿದ್ದು, ಚಿತ್ರದುರ್ಗ ಸೇರಿದಂತೆ ತುಮಕೂರು ಜಿಲ್ಲೆಯಲ್ಲಿಯೇ ನಿರ್ಣಾಯಕ 2 ಲಕ್ಷದಷ್ಟು ಗೊಲ್ಲರಿರುವ ತುಮಕೂರು ಜಿಲ್ಲೆಗೆ ದಯವಿಟ್ಟು ವಿಧಾನ ಪರಿಷತ್ ಸದಸ್ಯರನ್ನಾಗಿ ಚಂದ್ರಶೇಖರಗೌಡರನ್ನು ನೇಮಿಸಿ ಆದೇಶ ಹೊರಡಿಸಬೇಕು

ಮಾನ್ಯ ರಾಜ್ಯ ಕಾಂಗ್ರೆಸ್ (೦ಖಅಅ ಹಾಗೂ ಏಕಅಅ) ವರಿಷ್ಠರು ಹಾಗೂ ಜಿಲ್ಲಾ ಮಾನ್ಯ ಮಂತ್ರಿಗಳು ಹಾಗೂ ಮುಖಂಡರುಗಳು ಈ ಎಲ್ಲಾ ಹಿನ್ನೆಲೆಯನ್ನು ಪರಿಗಣಿಸಿ, ಸಕ್ರಿಯ, ನಿಷ್ಠಾವಂತ ಹಾಗೂ ಪ್ರಾಮಾಣಿಕ ರಾಜಕಾರಣಿಯಾದ ಚಂದ್ರಶೇಖರಗೌಡರಿಗೆ ವಿಧಾನ ಪರಿಷತ್ ಸದಸ್ಯತ್ವವನ್ನು ನೀಡುವಂತೆ ಆಗ್ರಹಿಸಿದರು.

ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜಿ. ಆರ್ ರಮೇಶ್ ಮಾತನಾಡಿ

ಇತ್ತೀಚೆಗೆ ನಡೆದ ಜಿಲ್ಲೆಯ ಲೋಕಸಭಾ ಚುನಾವಣೆಯಲ್ಲಿಯೂ ಸಹ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿರುವ ಎಸ್.ಪಿ. ಮುದ್ದಹನುಮೇಗೌಡರವರ ಪರವಾಗಿ ಕ್ಷೇತ್ರಾದ್ಯಂತ ನಮ್ಮ ಜಿಲ್ಲಾಧ್ಯಕ್ಷರಾಗಿರುವ ಚಂದ್ರಶೇಖರ್ ಗೌಡ ರವರು ಹಗಲಿರುಳೆನ್ನದೆ ಪ್ರಚಾರದಲ್ಲಿ ತೊಡಗಿಸಿ ಕೊಂಡಿದ್ದಾರೆ.

ಜಿಲ್ಲಾ ಕಾಡುಗೊಲ್ಲ ಸಮುದಾಯದ ಅಧ್ಯಕ್ಷರಾಗಿಯೂ ಸತತ 15 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಗೌಡರಿಗೆ ಇದೂವರೆವಿಗೂ ಯಾವುದೇ ಸ್ಥಾನ ಘೋಷಿಸದಿರುವುದು ದುಃಖದ ಸಂಗತಿಯಾಗಿದೆ ಎಂದರು.

ಕಾಂಗ್ರೆಸ್ ಮುಖಂಡರುಗಳಾದ ಹಾಲಪ್ಪ , ಪುಲಮಾಚಿ ಗ್ರಾ.ಪಂ ಸದಸ್ಯ ನರಸಿಂಹ ಮೂರ್ತಿ , ಚಿತ್ತಯ್ಯ , ಕೋಟೆಕಲ್ಲಪ್ಪ ಹೆಚ್ , ಎಚ್ ರಾಮಾಂಜಿನೇಯ , ಹನುಮಂತಪ್ಪ , ಶಿವಾನಂದ್ , ಎಸ್ ಸಂಜೀವಯ್ಯ , ರಂಗನಾಥ್ , ಪೋಸ್ಟ್ ಮರಿಯಪ್ಪ , ಜಯರಾಮಯ್ಯ ಆರ್ ಉಪಸ್ಥಿತರಿದ್ದರು.

ಸ್ಥಳೀಯ

ಇ–ಪೇಪರ್: www.munjaneevartheepaper.com

# ಪ್ರಗತಿಪರ ಸಂಘಟನೆಗಳ ಒಕ್ಕೂಟದಿಂದ ಹಾಸನದಲ್ಲಿ ನಡೆದ ಪೆನ್ ಡ್ರೈವ್ ಪ್ರಕರಣ ವಿರೋಧಿಸಿ ಹಾಸನ ಚಲೋ ಕಾರ್ಯಕ್ರಮದ ಪೂರ್ವ ಭಾವಿ ಸಭೆ

ಪ್ರಸ್ತಾವಿಕವಾಗಿ ಶಿವಾನಂದ ಕುಗ್ವೆ ಮಾತನಾಡಿ ಹಾಸನದಲ್ಲಿ ನಡೆದ ಪೆನ್ ಡ್ರೈವ್ ಪ್ರಕರಣ ಇಡಿ ನಾಗರಿಕ ಸಮಾಜ ತಲೆತಗ್ಗಿಸುವ ಕೆಲಸ ಆಗಿದೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಇತರಹದ ಘಟನೆ ಮರುಕಳಿಸದಂತೆ ಕ್ರಮ ಜರಗಿಸುವುದು ಅನಿವಾರ್ಯವಾಗಿದೆ ಇದಕ್ಕೆ ಎಲ್ಲಾ ಪ್ರಗತಿಪರರು ಸಾಮಾಜಿಕ ಕಳಕಳಿವುಳ್ಳುವವರು ಇ ಹೋರಾಟದ ಮೂಲಕ ಮಹಿಳೆಯರಿಗೆ ನ್ಯಾಯ ಸಿಗುವಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗಿದೆ ಎಂದರು...ರಾಜ್ಯ ಜನವಾದಿ ಮಹಿಳಾ



ಸಂಘದ ರಾಜ್ಯ ಉಪಾಧ್ಯಕ್ಷೆಯಾದ ಕೆ.ಎಸ್.ವಿಮಲ ಮಾತನಾಡುತ್ತಾ..

ಮೊದಲು ಬಳ್ಳಾರಿ ಯಲ್ಲಿ ಫಣಿದಣಿಗಳ ರಾಜ್ಯಭಾರ ಆಗಿತ್ತು ಆದರೆ ಇಗ ಹಾಸನವಾಗಿದೆ.

ಹಾಸನದಲ್ಲಿ ಹಣ ಬಲ ರಾಜಕೀಯ ಬಲ ಎಲ್ಲಾ ಇಟ್ಟುಕೊಂಡು ಸಾರ್ವಜನಿಕರಿಗೆ ಪಾಳೆಗಾರಿಕೆ ಮಾಡ್ತಾ ಇರುವ ಇವರು ಇನ್ನು ಎಸ್ಟು ಹೆಣ್ಣು ಮಕ್ಕಳಿಗೆ ಅನ್ಯಾಯ ಮಾಡ್ತಾರೆ ಇದಕ್ಕೆಲ್ಲಾ ನಮ್ಮ ತರಹದ ಇನ್ನು ಅನೇಕ ಪ್ರಗತಿಪರರು ಇವರ ವಿರುದ್ಧ ಧ್ವನಿ ಎತ್ತುವ ಮೂಲಕ ಅವರ ಪಾಳೆಗಾರಿಕೆ ನಿಲ್ಲಿಸಬೇಕು ಎಂದರು.

ಇದೇ ತಿಂಗಳ 30 ನೆ ತಾರೀಖಿನಂದು ಇಡೀ ರಾಜ್ಯದ ಎಲ್ಲಾ ಪ್ರಗತಿಪರರು ಸೇರಿ ಹಾಸನ ಚೆಲೋ ಎಂಬ ಕಾರ್ಯಕ್ರಮದಡಿ ಯಲ್ಲಿ ಪಾಲ್ಗೊಂಡು ಪ್ರಜ್ವಲ್ ರೇವಣ್ಣ ಅವರಿಗೆ ಅರಿಯಾದ ಶಿಕ್ಷೆಯಾಗಬೇಕು ಇನ್ನು ರಾಜ್ಯದಲ್ಲಿ ಇತರಹದ ಘಟನೆ ಮರುಕಳಿಸದಂತೆ ಜಾಗ್ರತೆ ವಹಿಸಬೇಕು ಎಂದರು...

ನಮ್ಮ ಹದಿನಾಲ್ಕು ಬೇಡಿಕೆಗಳನ್ನು ಮುಂದಿಟ್ಟು ಈ ಹೋರಾಟ ಮಾಡ್ತಾ ಇದಿವಿ ಇದಕ್ಕೆಲ್ಲಾ ಸರ್ಕಾರ ಉತ್ತರಿಸಬೇಕು ಎಂದರು ಪ್ರಜ್ವಲ್ ರೇವಣ್ಣ ಅವರನ್ನು ಕರೆತರುವಲ್ಲಿ ಕೇಂದ್ರ ಸರ್ಕಾರದ ಮುಂದಾಗಬೇಕು ಎಂದರು...

ಈ ಸಂದರ್ಭದಲ್ಲಿ..

ಕೆ.ಎಸ್.ವಿಮಲ.ಶಿವಾನಂದ ಕುಗ್ವೆ.ಸುರೇಂದ್ರ ನಾಥ್. ವೃಂದಾ ಹೆಗಡೆ.ವಸಂತ್ ಕುಗ್ವೆ. ಮೋಹನ್ ಮೂರ್ತಿ. ವಸಂತ್ ಕುಮಾರ್.ಗೂಳಗೂಡು ನಾರಾಯಣ್. ಹೆಚ್.ಬಿ.ರಾಘವೇಂದ್ರ.ಹಾಗೂ ಇನ್ನಿತರರು ಪಾಲ್ಗೊಂಡಿದ್ದರು... ವರದಿ.ರಾಘವೇಂದ್ರ ತಾಳಗುಪ್ಪ

ಮುಂಜಾನೆ ವಾರ್ತೆ
ಕನ್ನಡ ದಿನಪತ್ರಿಕೆ
ಇ-ಪೇಪರ್: www.munjaneevartheepaper.com
24 FRIDAY MAY 2024
24 ಶುಕ್ರವಾರ ಮೇ 2024

# ಕೃತಕ ಅಭಾವ ಸೃಷ್ಠಿ ಆಗದಂತೆ ನೋಡಿಕೊಳ್ಳಬೇಕು

ಮುದ್ದೇಬಿಹಾಳ ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ತಾಳಿಕೋಟಿ ತಹಶೀಲ್ದಾರ ಕೀರ್ತಿ ಚಾಲಕ ರವರ ಅಧ್ಯಕ್ಷತೆಯಲ್ಲಿ ತಹಶೀಲ್ದಾರ ಆಯಾ ತಾಲ್ಲೂಕಿನ ರಸಗೊಬ್ಬರ, ಮಳಿಗೆಗಳ ಮಾರಾಟಗಾರರ ಸಭೆ ಯಲ್ಲಿ ತಾಲೂಕಾ ಕೃಷಿ ಅಧಿಕಾರಿ ಸುರೇಶ ಭಾವಿಕಟ್ಟಿ ಮಾತನಾಡಿದರು.

ಮುದ್ದೇಬಿಹಾಳ: 2024-25 ಮುಂಗಾರು ಹಂಗಾಮಿನ ಪೂರ್ವದಲ್ಲಿ ಬಿತ್ತನೆ ಬೀಜ, ರಸಗೊಬ್ಬರ ದಾಸ್ತಾನಿನ ಬಗ್ಗೆ ಚರ್ಚಿಸಿ ರೈತರಿಗೆ ಯಾವುದೇ ಬಿತ್ತನೆ ಬೀಜ, ರಸಗೊಬ್ಬರ ಕೊರತೆ ಆಗದಂತೆ ನೋಡಿಕೊಳ್ಳಬೇಕು ಹಾಗೂ ಯಾವುದೇ ಕೃತಕ ಅಭಾವ ಸೃಷ್ಠಿ ಆಗದಂತೆ ನೋಡಿಕೊಳ್ಳಬೇಕು ಎಂದು ತಾಲೂಕಾ ಕೃಷಿ ಅಧಿಕಾರಿ ಸುರೇಶ ಭಾವಿಕಟ್ಟಿ ಹೇಳಿದರು.



ಪಟ್ಟಣದ ಸಹಾಯಕ ಕೃಷಿ ನಿರ್ದೇಶಕರ ಕಛೇರಿಯಲ್ಲಿ ತಾಳಿಕೋಟಿ ತಹಶೀಲ್ದಾರ ಕೀರ್ತಿ ಚಾಲಕ ರವರ ಅಧ್ಯಕ್ಷತೆಯಲ್ಲಿ ತಹಶೀಲ್ದಾರ ಆಯಾ ತಾಲ್ಲೂಕಿನ ರಸಗೊಬ್ಬರ, ಮಳಿಗೆಗಳ ಮಾರಾಟಗಾರರ ಸಭೆ ಯಲ್ಲಿ ಮಾತನಾಡಿದರು.

- ಒಂದು ವಾರದೊಳಗೆ ಯಾವುದೇ ಪರವಾನಿಗೆಯಲ್ಲಿ ಉತ್ಪನ್ನಗಳನ್ನು ಸೇರಿಸುವದು ಅಥವಾ ನವೀಕರಿಸುವದು ಇದ್ದಲ್ಲಿ ಕೂಡಲೇ ಮಾಡಿಸಿ ಪ್ರಧಾನ ಪ್ರಮಾಣ ಪತ್ರಗಳ ನವೀಕರಿಸುವದರ ಅನುಮತಿ ಪಡೆದು ದಾಖಲಾತಿಗಳ ಅಚ್ಚುಕಟ್ಟು ನಿರ್ವಹಣೆ ಮಾಡಬೇಕಾಗಿ ಕಟ್ಟುನಿಟ್ಟಾಗಿ ಸೂಚಿಸಿದೆ. ಈಹಿನ್ನೆಲೆಯಲ್ಲಿ ಯಾವುದೇ ನಕಲಿ ಅಥವಾ ನೊಂದಾಯಿತವಲ್ಲದ ಅಥವಾ ಅವಧಿ ಮುಗಿದಿರುವ ಉತ್ಪನ್ನಗಳನ್ನು ಮಾರಾಟ ಕೃಷಿ ಉತ್ಪನ್ನಗಳನ್ನು ಮಾರಾಟ ಮಾಡುವುದು ಕಾನೂನು ಬಾಹಿರವಾಗಿದ್ದು ಹಾಗೇನಾದರೂ ಸಾರ್ವಜನಿಕರಿಂದ ಅನಧಿಕೃತ ಮಾರಾಟ ಮಾಡುತ್ತಿರುವ ಬಗ್ಗೆ ದೂರುಗಳ ಕಂಡಬಂದಲ್ಲಿ ದಾಳಿ ನಡೆಸಿ ಕಠಿಣ ಕಾನೂನು ಕ್ರಮ ಜರುಗಿಸಲಾಗುವುದು.
- ಸರಕಾರದ ಎಲ್ಲಾ ನಿಯಮಗಳನ್ನು ಆದೇಶಗಳನ್ನು ಪಾಲಿಸಿ ರೈತರ ಹಿತದೃಷ್ಠಿ ಕಾಪಾಡಬೇಕು ಮತ್ತು ಎಲ್ಲರೂ ಗುಣಮಟ್ಟದ ಕೃಷಿ ಪರಿಕರಗಳನ್ನು ರೈತರಿಗೆ ವಿತರಣೆ ಮಾಡುವಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.
- ರೈತರು ತಮ್ಮ ಬಳಿ ಖರಿದಿಸಿ ಪರಿಕರಕರಗಳ ಬಗ್ಗೆ ಎಲ್ಲರೂ ಕಡ್ಡಾಯವಾಗಿ ರಸೀದಿ ನೀಡಬೇಕು, ತಾವು ಮಾರಾಟ ಮಡುವ ಎಲ್ಲಾ ಉತ್ಪನ್ನಗಳಿಗೆ ಉದ್ರಿಬಿಲ್ಲು ಇನ್ವಾಯಿಸ್ ದಾಖಲಿಡಬೇಕು. ಯಾವುದೇ ಅನಧಿಕೃತ ದಾಸ್ತಾನನ್ನು ಅನುಮತಿ ಪಡೆಯದ ಸ್ಥಳದಲ್ಲಿ ಇಡುವಂತಿಲ್ಲ ತಾವು ದಾಸ್ತಾನಿಕರಿಸುವ ಗೋದಾಮಿನ ಸ್ಥಳ ಪರವಾನಿಗೆಯಲ್ಲಿ ಕಡ್ಡಾಯವಾಗಿ ಸೇರಿಸಬೇಕು. ಪ್ರತಿ ತಿಂಗಳು ತಮ್ಮಲ್ಲಿರುವ ದಾಸ್ತಾನಿನ ವಿವರ ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಕಡ್ಡಾಯವಾಗಿ ನೀಡಬೇಕು ಎಂದು ತಿಳಿಸಿದರು.

ಕೃಷಿ ಅಧಿಕಾರಿ ದಾನಪ್ಪ ಕತ್ನಳ್ಳಿ ಹಾಗೂ ರಾಜೇಶ್ವರಿ ನಾಡಗೌಡರ, ಕೃಷಿ ಅಧಿಕಾರಿಗಳಾದ ಜಿ ಬಿ ಮೆದಿಕಿನಾಳ, ಆರ್ ಬಿ ರುದ್ರವಾಡಿ, ಎಸ್ ಆರ್ ಕಟ್ಟಿಮನಿ, ಆರ್ ವಾಯ್ ಸಾಗರ ಹಾಗೂ ಎಮ್ ಹೆಚ್ ಬೀಳಗಿ ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಸಭೆಯ ಮುಖ್ಯ ಅತಿಥಿಗಳಾಗಿ ಕೃಷಿ ಪರಿಕರ ಮಾರಾಟಗಾರರ ಅಧ್ಯಕ್ಷ ಶಂಕರಗೌಡ ಹಿರೇಗೌಡರ ರವರು ಪ್ರತಿನಿಧಿಯಾಗಿ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಕೃಷಿ ಅಧಿಕಾರಿ ಮಹೇಶ ಜೋಷಿ ಸ್ವಾಗತಿಸಿ ನೀರೂಪಿಸಿದರು.



# ಎರಡು ಬೈಕ್ ಗಳ ನಡುವೆ ಮುಖ ಮುಖಿ ಡಿಕ್ಕಿ ಓರ್ವ ಗಭೀರ....!

ಹೊಸನಗರ : ತಾಲೂಕಿನಲ್ಲಿ ರಿಪ್ಪನ್ ಪೇಟೆಯ ಗೌವಟೂರು ಬಳಿಯ ಹೊಳೆ ಸೇತುವೆ ಬಳಿ ನಡೆದಿದೆ. ಸಂತೋಷ್. (35) ಗಂಭೀರ ಗಾಯಗೊಂಡ ವ್ಯಕ್ತಿ. ರಿಪ್ಪನ್ ಪೇಟೆ ಕಡೆಯಿಂದ ಜೇನಿ ಗ್ರಾಮಕ್ಕೆ ಹೋಗುತ್ತಿದ್ದ ಹೋಂಡಾ ಆಕ್ಟಿವಾ ಬೈಕ್ . ಕೋಡೂರು ಕಡೆಯಿಂದ ರಿಪ್ಪನ್ ಪೇಟೆಗೆ ಬರುತ್ತಿದ್ದ ಎರಡು ಬೈಕ್ ನಡುವೆ ಮುಖಾಮುಖಿ ಡಿಕ್ಕಿ. ಸಂತೋಷ್ ಎಂಬ ಬೈಕ್ ಸವಾರನಿಗೆ ಎಡಗಾಲು ಮುರಿದಿದ್ದು ಇನ್ನೊಬ್ಬ ಬೈಕ್ ಸವಾರನಿಗೆ ಸಣ್ಣ ಪುಟ್ಟ ಗಾಯ ಆಗಿದೆ.

ವರದಿ. ತನುಜ್ ಕುಮಾರ್ ಹೊಸನಗರ...

# ಹಂಗಳ ಪ್ರೇಮ್ ಕುಮಾರ್ ಪಿ.ಹೆಚ್.ಡಿ ಪ್ರಧಾನ

ಗುಂಡ್ಲುಪೇಟೆ: ಜೀವನದಲ್ಲಿಅಸಾಧ್ಯವಾದುದನ್ನು ಸಾಧಿಸುವ ಛಲ ಮತ್ತು ಆತ್ಮವಿಶ್ವಾಸವಿದ್ದರೆ ಸಾಧನೆ ಹಾದಿ ಸುಲಭ ಎಂಬುದನ್ನು ತೋರಿಸಿದ ಹಳ್ಳಿಯ ಯುವ ಪ್ರತಿಭೆ ಪ್ರೇಮ್ ಕುಮಾರ್



ಗುಂಡ್ಲುಪೇಟೆ ತಾಲೂಕಿನ ಹಂಗಳ ಗ್ರಾಮದ ಗೋಪಾಲ್ ಎಂಬುವರು ಮೊದಲ ಪುತ್ರ ಪ್ರೇಮ್ ಕುಮಾರ್ .ಜಿ. ಹಂಗಳ ಗ್ರಾಮದ ಮೊದಲ ಬಾರಿಗೆ

ಪಿ.ಹೆಚ್.ಡಿ.ಪಡೆದ ಯುವಕ ಎಂಬ ಹೆಗ್ಗಳಿಕೆ ಪಡೆದಿದ್ದಾರೆ ಈ ಮೂಲಕ ಹಳ್ಳಿಯ ಯುವಕರು ಮನಸ್ಸು ಮಾಡಿದ್ದಾರೆ ಏನು ಬೇಕಾದರು ಸಾಧನೆ ಸುಲಭ ಎಂಬುವುದನ್ನು ತೋರಿಸಿಕೊಟ್ಟಿದ್ದಾರೆ

ಶಿವಮೊಗ್ಗ ಕುವೆಂಪು ವಿಶ್ವವಿದ್ಯಾಲಯ ಡಾ.ದತ್ತಾತ್ರೇಯ ಎಮ್ ಮಾರ್ಗ ದರ್ಶನದಲ್ಲಿ ಮೈಗ್ರೇಶನ್ ಆಂಡ್ ಐಡೆಂಟಿಟಿ: ಎ ಸ್ಟಡಿ ಆಫ್ ಆಫ್ರಿಕನ್ ಡಯಾಸ್ಪೊರಾ ಇನ್ ಸೆಲೆಕ್ಟ್ ಆಫ್ರೊ-ಯುರೋಪಿಯನ್ ನಾವೆಲ್ಸ್ ಪಿ.ಹೆಚ್.ಡಿ.ಪಡೆದಿದ್ದಾರೆ ವರದಿ: ಮಹದೇವಪ್ರಸಾದ್ ಹಂಗಳ

# ಕುಡಿಯುವ ನೀರು ಪೂರೈಕೆ ಮಾಡಿಲ್ಲ

ಮುಂಜಾನೆ ವಾರ್ತೆ. ಸುದ್ದಿ. ಮುದ್ದೇಬಿಹಾಳ ಪಟ್ಟಣದ ವಾರ್ಡ ನಂ 15ರಲ್ಲಿ ಪುರಸಭೆ ಅಧಿಕಾರಿಗಳು ಕಳೇದ 15ದಿನಗಳಿಂದ ಕುಡಿಯುವ ನೀರು ಪೂರೈಕೆ ಮಾಡಿಲ್ಲ, ಕಸ ಸ್ವಚ್ಚಗೊಳಿಸುತ್ತಿಲ್ಲ, ಬೀದಿ ದೀಪಗಳನ್ನು ಅಳವಡಿಸುತ್ತಿಲ್ಲ ಸೇರಿದಂತೆ ಇತರೇ ಮೂಲಬೂತ ಸೌಲಭ್ಯಗಳನ್ನು ನೀಡುವಂತೆ ಆಗ್ರಹಿಸಿ ವಾರ್ಡನ ನಿವಾಸಿಗಳಾದ ಮಹಿಳೆಯರು ಹಾಗೂ ಯುವ ಮುಖಂಡರುಗಳು ಖಾಲಿ ಕೊಡ ಪ್ರದರ್ಶಿಸಿ ಗುರುವಾರ ಪುರಸಭೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಮುದ್ದೇಬಿಹಾಳ:ಪಟ್ಟಣದ ವಾರ್ಡ ನಂ 15ರಲ್ಲಿ ಪುರಸಭೆ ಅಧಿಕಾರಿಗಳು ಕಳೇದ 15ದಿನಗಳಿಂದ ಕುಡಿಯುವ ನೀರು ಪೂರೈಕೆ ಮಾಡಿಲ್ಲ, ಕಸ ಸ್ವಚ್ಚಗೊಳಿಸುತ್ತಿಲ್ಲ, ಬೀದಿ ದೀಪಗಳನ್ನು ಅಳವಡಿಸುತ್ತಿಲ್ಲ ಸೇರಿದಂತೆ ಇತರೇ ಮೂಲಬೂತ ಸೌಲಭ್ಯಗಳನ್ನು ನೀಡುವಂತೆ ಆಗ್ರಹಿಸಿ ವಾರ್ಡನ ನಿವಾಸಿಗಳಾದ ಮಹಿಳೆಯರು ಹಾಗೂ ಯುವ ಮುಖಂಡರುಗಳು ಖಾಲಿ ಕೊಡ ಪ್ರದರ್ಶಿಸಿ ಗುರುವಾರ ಪುರಸಭೆಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು.

ಈ ವೇಳೆ ಮುಖಂಡ ಯಾಶಿನ ಅತ್ತಾರ ಅವರು ಮಾತನಾಡಿ ವಾರ್ಡನಂ 15ರಲ್ಲಿನ ಜನರಿಗೆ ವಾಟರ್ ಮ್ಯಾನ್ ಸಮರ್ಪಕವಾಗಿ ಕುಡಿಯಲು ನೀರು ಸರಬರಾಜ ಮಾಡುತ್ತಿಲ್ಲ ಈ ಬಗ್ಗೆ ಪುರಸಭೆ ಅಧಿಕಾರಿಗಳಿಗೆ ಮತ್ತು ವಾರ್ಡಿನ ಸದಸ್ಯರಿಗೆ ಸಾಕಷ್ಟು ಬಾರಿಗೆ



ದೂರು ಸಲ್ಲಿಸಲಾಗಿದೆ ಆದರೇ ಪುರಸಭೆ ಅಧಿಕಾರಿಗಳಿಂದಾಗಲಿ ಅಥವಾ ಸದಸ್ಯರಿಂದಾಗಲಿ ಸ್ಪಂದನೆ ದೊರೆತಿಲ್ಲ, ವಾಟರ್ ಮನಗೇ ದೂರವಾಣಿ ಮೂಲಕ ಕರೆ ಮಾಡಿದರೇ ಯಾವಾಗಲೂ ಮೋಬೈಲ್ ಸ್ವಿಚ್ ಆಫ್ ಎಂದು ಹೇಳುತ್ತದೆ ಇದರಿಂದ ಯಾರಿಗೆ ಸಂಪರ್ಕಿಸಬೇಕು ಎಂಬುದು ತಿಳಿಯುತ್ತಿಲ್ಲ ಇದು ಕೇವಲ ಒಂದು ನೀರಿನ ಸಮಸ್ಯೆ ಮಾತ್ರವಲ್ಲ ವಾರ್ಡನಲ್ಲಿನ ಎಲ್ಲ ಮುಖ್ಯ ರಸ್ತೆಗಳಲ್ಲಿ ವಿದ್ಯುತ್ ದ್ವೀಪಗಳ ಇಲ್ಲ, ರಸ್ತೆಗಳು ಹದಗೆಟ್ಟು ಹೋಗಿವೆ, ಚರಂಡಿ ಸ್ವಚ್ಚತೆಯಿಲ್ಲದೇ ವಾರ್ಡನ ತುಂಬೇಲ್ಲ ಗಬ್ಬುವಾಸನೆ ಧೂರ್ನಾತದಿಂದ ಜನರು ಬೇಸತ್ತು ಹೊಗಿದ್ದಾರೆ, ಮಾತ್ರವಲ್ಲದೇ ಡೇಂಘಿ, ಕಾಲರಾದಂತ ರೋಗಳಗಳು ಉಲ್ಬಣಗೊಳ್ಳುವಂತಾಗಿದೆ, ಜತೆಗೆ ನಿತ್ಯ ಮಹಿಳೆಯರು ಬಹಿರ್ದೇಶೆಗೆ ಹೊಗಲು ಮಹಿಳೆಯರಿಗೆ ಪ್ರತ್ಯೇಕ ಶೌಚಗ್ರಹಗಳು ಇಲ್ಲ ಹೀಗೆ ಹತ್ತು ಹಲವಾರು ಸಮಸ್ಯೆಗಳು ಎದುರಾಗುತ್ತಲೇ ಇವೇ ಆದರೇ ಇದೇಲ್ಲವನ್ನೂ ಸಾರ್ವಜನಿಕರ ಹಿತ ಕಾಪಾಡಬೇಕಾದ ಪುರಸಭೆ ಅಧಿಕಾರಿಗಳು ನಮ್ಮ ವಾರ್ಡಿನ ಕಡೆ ಒಂದು ದಿನವೂ ತಿರುಗಿ ನೋಡಿಲ್ಲ ಸಮಸ್ಯೆ ಆಲಿಸಿಲ್ಲ, ಹಾಗಾಗಿ ಸಧ್ಯ ಅನಿವಾರ್ಯವಾಗಿ ಎಲ್ಲ ಮಹಿಳೆಯರು ಯುವಕರು ಈ ಹೋರಾಟ ಬನಡೆಸಬೇಕಾಗಿದೆ. ನಮಗೆ ಸಮರ್ಪಕ ನೀರು ಹಾಗೂ ವಾರ್ಡಿನ ಮೂಲಬೂತ ಸೌಲಭ್ಯಗಳನ್ನು ಒದಗಿಸುವವರೆಗೂ ಪ್ರತಿಭಟನೆಯಿಂದ ಹಿಂದೆ ಸಡರಿಯುವುದಿಲ್ಲ ಎಂದು ಪಟ್ಟು ಹಿಡಿದರು.

ಈ ವೇಳೆ ಮಾಹಿತಿ ತಿಳಿದ ಪುರಸಭೆ ಮುಖ್ಯಾಧಿಕಾರಿ ಬಸವರಾಜ ಬಳಗಾನೂರ ಅವರು ಧರಣೆ ನಿರತರತ್ತ ದಾವಿಸಿ ಕಳೇದ ಒಂದುವಾರದಿಂದ ಪಟ್ಟಣದಲ್ಲಿ ಸರಿಯಾಗಿ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯೆಯ ಉಂಟಾಗಿದ್ದ ಕಾರಣ ಪಟ್ಟಣದ ಬಹುತೇಕ ಎಲ್ಲ ವಾರ್ಡಗಳಲ್ಲಿ ನೀರು ಪೂರೈಕೆಯಲ್ಲಿ ತೊಂದರೆಯಾಗಿದೆ. ಸಧ್ಯ ನಿಮ್ಮ ವಾರ್ಡನಲ್ಲಿ ಇಂದು ಸಂಜೇ ಒಳಗಾಗಿ ನೀರು ಪರ್ರೈಕೆ ಮಾಡಲಾಗುವುದು, ಜೊತೆಗೆ ನಿಮ್ಮ ವಾರ್ಡಿಗೆ ಬೇಟಿ ಕೊಟ್ಟು ನಿಮ್ಮ ಯಾವೂದೇ ಮೂಲ ಬೂತ ಸಮಸ್ಯೆಗಳಿದ್ದರೂ ಸ್ಪಂದಿಸಿ ಬಗೆಹರಿಸುತ್ತೇನೆ ಅದಕ್ಕೆ ಪ್ರತಿಭಟನೆ ಕೈಬಿಡಿ ಎಂದು ಮನೋಲಿಸಿದ ಪರಿಣಾಮ ಪ್ರತಿಭಟನಾಕಾರರು ಅಧಿಕಾರಿಗಳ ಮಾತಿಗೆ ಮನ್ನಣೆ ನೀಡಿ ಪ್ರತಿಭಟನೆಯಿಂದ ಹಿಂದೆ ಸರಿದರು.

ಈ ವೇಳೆ ಸೋಹೇಲ್ ಚೌಧರಿ, ಯಾಶಿನ ಅತ್ತಾರ, ಯೂನಿಸ್ ಹುಣಚ್ಯಾಳ, ಮಾಹಾಂತೇಶ ಕಡಿಬಾಗಲು, ಪವಾಡೇಪ್ಪ ಸಜ್ಜನ, ಖಾಜೆಸಾಬ ಮಳಗಿ, ಅಬ್ಬಾಸ ಹುಣಶ್ಯಾಳ,ಸೋಹೇಲ್ ಬಾಗವಾನ,ರಫೀಕ ಬೀಳಗಿ,ಫಜ್ಲೈ ಮ್ಯಾಗೇರಿ, ಮಹಾಂತೇಶ ಹೂಗಾರ, ಬಿಬಿಮರಿಯಮ್ ಚೌಧರಿ,ಹೀನಾ ಮಳಗಿ ಸೇರಿದಂತೆ ಅನೇಕರು ಇದ್ದರು.

# ಗುರುವಾರ ಮಧ್ಯಾಹ್ನ ಒಂದು ಗಂಟೆಗೂ ಅಧಿಕ ಕಾಲ ರಾಷ್ಟೀಯ ಹೆದ್ದಾರಿ 206 ಬಂದ್



ತಾಲೂಕಿನ ತಾಳಗುಪ್ಪ ಹೋಬಳಿ, ಕಾರ್ಗಲ್-ಜೋಗ ಪಟ್ಟಣ ಪಂಚಾಯತಿ ಹಾಗೂ ಪೇಟೆ ಸುತ್ತಮುತ್ತ ಸುರಿದ ಧಾರಾಕಾರ ಮಳೆ ಹಾಗೂ ಗಾಳಿಗೆ ಹಲವು ಮನೆ, ಮರಗಳು ಧರೆಗುರುಳಿದ್ದು, ಲಕ್ಷಾಂತರ ರೂ. ನಷ್ಟವಾಗಿದ್ದಲ್ಲದೆ, ತಾಳಗುಪ್ಪ ಬಳಿ ಗುರುವಾರ ಮಧ್ಯಾಹ್ನ ಒಂದು ಗಂಟೆಗೂ ಅಧಿಕ ಕಾಲ ರಾಷ್ಟೀಯ ಹೆದ್ದಾರಿ 206 ಬಂದ್ ಆಗಿ ಪ್ರಯಾಣಿಕರು ಪರದಾಡುವ ಪರಿಸ್ಥಿತಿ ನಿರ್ಮಾಣವಾಗಿತ್ತು.

ತಾಳಗುಪ್ಪ ಹೋಬಳಿ ವ್ಯಾಪ್ತಿಯ ಯಲಕುಂದ್ಲಿ, ಪಡವಗೋಡು, ಕಾನಲೆ, ತಾಳಗುಪ್ಪ, ಮರತ್ತೂರು, ಸೈದೂರು, ನೆಜ್ಜೂರು, ಮೊದಲಾದ ಗ್ರಾಮಗಳಲ್ಲಿ ಮಧ್ಯಾಹ್ನ 2 ಗಂಟೆ ಸುಮಾರಿಗೆ ಪ್ರಾರಂಭವಾದ ಗುಡುಗು, ಸಿಡಿಲು, ಗಾಳಿ ಸಹಿತ ಅಬ್ಬರದ ಮಳೆಯಿಂದಾಗಿ ಸುಮಾರು 10ಕ್ಕೂ ಹೆಚ್ಚು ಮರ ಮುರಿದು ಬಿದ್ದ ಪರಿಣಾಮ 20ಕ್ಕೂ ಹೆಚ್ಚು ವಿದ್ಯುತ್ ಕಂಬಗಳು ನೆಲಕ್ಕುರುಳಿವೆ. ಯಲಕುಂದ್ಲಿಯಲ್ಲಿ 1, ಪಡವಗೋಡಿನಲ್ಲಿ ಸುಮಾರು 2&3, ಮರತ್ತೂರು, ತಾಳಗುಪ್ಪದಲ್ಲಿ 2&3 ಮರಗಳು ಬಿದ್ದಿದ್ದರಿಂದ 3&4 ಕಂಬಗಳು ಮುರಿದಿವೆ. ಇದರಿಂದಾಗಿ ತಾಳಗುಪ್ಪ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಿದೆ.ಇಂಧನ ಇಲಾಕೆಯವರು ವಿದ್ಯುತ್ ಸರಿ ಪಡಿಸಲು ಹರಸಾಹಸ ಪಡುತ್ತಾಇದ್ದು.ಇದಲ್ಲದೆ ಮರತ್ತೂರು ಗ್ರಾಮದಲ್ಲಿರುವ ಮಹಾಗಣಪತಿ ಟ್ರೇರ್ಸ್ ಮಿಲ್‌ನ ಗೋಡೌನ್‌ನ ಮಾಡಿನ ಟ್ರಸ್‌ಗಳು (ಟನ್‌ಗಟ್ಟಲೆ ತೂಕ ವಿದ್ದವು) ಹಾರಿ ಹೋಗಿ, ಮಿಲ್‌ನಲ್ಲಿದ್ದ ಲಕ್ಷಾಂತರ ರೂಪಾಯಿ ಮೌಲ್ಯದ ಅಕ್ಕಿ, ಬತ್ತ ನೀರಿಗಾಹುತಿಯಾಗಿದೆ. ವಿಪರೀತ ಗಾಳಿಗೆ ಟ್ರಸ್‌ಗಳು ಹಾರಿ ವಿದ್ಯುತ್ ತಂತಿಯ ಮೇಲೆ ಬಿದ್ದಿದ್ದರಿಂದ ಬೆಂಕಿ ಕಾಣಿಸಿಕೊಂಡಿದೆ. ತಾಳಗುಪ್ಪ ಬಳಿಯ ರಾಷ್ಟೀಯ ಹೆದ್ದಾರಿ 206 ರಸ್ತೆಯಲ್ಲಿ ಹಲವು ಕಂಬ, ಮರ ಮುರಿದ ಬಿದ್ದ ಪರಿಣಾಮ ಒಂದು ಗಂಟೆಗೂ ಹೆಚ್ಚುಕಾಲ ವಾಹನ ಸವಾರರು ರಸ್ತೆಯಲ್ಲೇ ನಿಂತು ಪರದಾಡಬೇಕಾಯಿತು.

ಕಾರ್ಗಲ್ ವ್ಯಾಪ್ತಿಯ ಶೆಟ್ಟಿಕ್ಯಾಂಪ್ ಬಳಿ ಶೈನಿ ಥಾಮ್ಸನ್ ಮನೆಯ ಮೇಲ್ಚಾವಣಿ ಹಾರಿ ಹೋಗಿದೆ. ಜತೆಯಲ್ಲಿ ಗೋಡೆ ಕುಸಿದು ಅಪಾರ ಹಾನಿಯುಂಟಾಗಿದೆ. ಈ ಭಾಗದಲ್ಲಿ ಮಧ್ಯಾಹ್ನ 1.30ರ ವೇಳೆಗೆ ಪ್ರಾರಂಭವಾದ ಧಾರಾಕಾರ ಮಳೆ ಸುಮಾರು 3 ಗಂಟೆವರೆಗೆ ಸುರಿದಿದ್ದು, ಅಪಾರ ಹಾನಿಯನ್ನುಂಟು ಮಾಡಿದೆ.

ಸಾಗರ ಪೇಟೆ ಸುತ್ತ ಗುಡುಗು ಸಹಿತ ಸಾಧಾರಣವಾದ ಮಳೆ ಬಂದಿದ್ದರಿಂದ ಕೆಲವು ಮರಗಳು ಬಿದ್ದ ವರದಿಯಾಗಿದೆ.

ವರದಿ .ರಾಘವೇಂದ್ರ ತಾಳಗುಪ್ಪ



ಮುಂಜಾನೆ ವಾರ್ತೆ ಸುದ್ದಿ: ತಾಳಿಕೋಟಿ: ತಾಲೂಕಿನ ಬಂಜಲಭಾವಿ ಗ್ರಾಮದ ಶ್ರೀ ಮಲ್ಲಿಕಾರ್ಜುನ ಜಾತ್ರೋತ್ಸವ ಅಂಗವಾಗಿ ಮಹಾ ರಥೋತ್ಸವ ಮೇ 23ರಂದು ಸಂಜೆ 5 ಗಂಟೆಗೆ ಜರುಗಿತು. ಜಾತ್ರೋತ್ಸವ ಅಂಗವಾಗಿ ಸಾಗಿಬಂದ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಪುರಾಣ ಮಹಾ ಮಂಗಲ ಮತ್ತು ಧರ್ಮ ಸಭೆಯು ಬೆಳಗ್ಗೆ ಜರುಗಿತು. ಈ ಕಾರ್ಯಕ್ರಮದ ದಿವ್ಯ ಸಾನ್ನಿಧ್ಯವನ್ನು ಮಾಗಣಗೇರಿ ಬೃಹನ್ ಮಠದ ಶ್ರೀ ವಿಶ್ವರಾಧ್ಯ ಶಿವಾಚಾರ್ಯ ಮಹಾಸ್ವಾಮಿಗಳು ಪಾವನ ಸಾನಿಧ್ಯ ಶ್ರೀ ಡಾ.ಸಿದ್ಧರಾಮ ಶಿವಾಚಾರ್ಯ ಮಹಾಸ್ವಾಮಿಗಳು ಕಲಕೇರಿಯರು ಒಳಗೊಂಡು ನಾಡಿನ ಹರಗುರು ಚರಮೂರ್ತಿಗಳು ಭಾಗವಹಿಸಲಿದ್ದಾರೆ. ಸಂಜೆ 5 ಗಂಟೆಗೆ ಮಹಾ ರಥೋತ್ಸವ ಜರುಗಿತು. ರಾತ್ರಿ 9 ಗಂಟೆಗೆ ಸಾಮಾಜಿ ನಾಟಕ ಜರುಗುವುದು. ಈ ಕಾರ್ಯಕ್ರಮದಲ್ಲಿ ಆಗಮಿಸಲಿದ್ದಾರೆ. ಭಕ್ತಾದಿಗಳು ಮಹಾ ರಥೋತ್ಸವದಲ್ಲಿ ಪಾಲ್ಗಗೋಂಡ ಮಲ್ಲಿಕಾರ್ಜುನ ದೇವರ ಕೃಪೆಗೆ ಪುಣಿತರಾದರು.

ವರದಿ ಸುನೀಲ್ ಎಲ್ ತಳವಾರ ಮುಂಜಾನೆ ವಾರ್ತೆ ತಾಳಿಕೋಟಿ

# ವೈಭವಯುತವಾಗಿ ಜರುಗಿದ ಗೋವಿಂದ ರಾಥೋತ್ಸವ

ತಿರುಪತಿ: ಕಳೆದ ಎಂಟು ದಿನಗಳಿಂದ ತಿರುಪತಿ ತಿರುಮಲ ದೇವಸ್ಥಾನದಲ್ಲಿ ನಡೆಯುತ್ತಿರುವ ಬ್ರಹ್ಮೋತ್ಸವ ಅತ್ಯಂತ ಅದ್ದೂರಿ ಹಾಗೂ ಶ್ರದ್ಧಾಭಕ್ತಿಯಿಂದ ಜರುಗುತ್ತಿದ್ದು, ಗುರುವಾರ ತಿರುಪತಿ ಶ್ರೀ ಗೋವಿಂದರಾಜಸ್ವಾಮಿಯ ವಾರ್ಷಿಕ ಬ್ರಹ್ಮೋತ್ಸವ ರಾಥೋತ್ಸವ ಭಕ್ತರ ಮನಸೂರೆಗೊಂಡಿತು.

ಬೆಳಗ್ಗೆ 6.35ಕ್ಕೆ ಆರಂಭವಾದ ರಥೋತ್ಸವವು ಕರ್ನಾಳ ಬೀದಿ, ಬೇರಿ ಬೀದಿ, ಗಾಂಧಿ ರಸ್ತೆ ಮೂಲಕ ದೇವಸ್ಥಾನದ ಕೆ.ಇ.ರಥಮಂಟಪಕ್ಕೆ ಮರಳಿತು.

ಅಪಾರ ಸಂಖ್ಯೆಯ ಭಕ್ತರು ಗೋವಿಂದಾ... ಗೋವಿಂದಾ... ಎನ್ನುವ ನಾಮಸ್ಮರಣೆ ಮಾಡುತ್ತಾ ರಥವನ್ನು ಎಳೆದರು. ಭಕ್ತರು ಪ್ರತಿ ಹೆಜ್ಜೆಗೂ ಹರಿಸ್ಮರಣೆ ಮಾಡುತ್ತಾ ಗೋವಿಂದ ಸ್ವಾಮಿಯ ರಥೋತ್ಸವಕ್ಕೆ ಕರ್ಪೂರದ ಆರತಿಯನ್ನು



ಸಲ್ಲಿಸಿದರು. ಆತ್ಮವು ಸಾರಥಿ, ದೇಹವು ರಥ, ಬುದ್ಧಿಯು ಚಾಲಕ, ಮನಸ್ಸು ಲಗಾಮು, ಇಂದ್ರಿಯಗಳು ಕುದುರೆಗಳು ಮತ್ತು ವಸ್ತುಗಳು ಬೀದಿಗಳಾಗಿವೆ. ಹೀಗೆ ದೇಹವನ್ನು ರಥದೊಂದಿಗೆ ಹೋಲಿಸಿ ನೋಡಿದಾಗ ಸ್ಥೂಲ ಶರೀರವೇ ಬೇರೆ, ಸೂಕ್ಷ್ಮ ಶರೀರವೇ ಬೇರೆ, ಆತ್ಮವೇ ಬೇರೆ. ರಥೋತ್ಸವದಲ್ಲಿ ತತ್ವಜ್ಞಾನವನ್ನೇ ಜಗತ್ತಿಗೆ ಸಂದೇಶದ ಮೂಲಕ ಸಾರಲಾಯಿತು.

ನಂತರ ಬೆಳಗ್ಗೆ 10.30ರಿಂದ ಮಧ್ಯಾಹ್ನ 12ರವರೆಗೆ ಶ್ರೀದೇವಿ, ಭೂದೇವಿ ಹಾಗೂ 5 ಮಂದಿ ನಮ್ಮಾಳ್ವಾರ್ ಸಮೇತ ಶ್ರೀ ಗೋವಿಂದರಾಜ ಸ್ವಾಮಿಗೆ ಸ್ನಪನ ತಿರುಮಂಜನ ಕಾರ್ಯಕ್ರಮ ನಡೆಯಿತು. ಹಾಲು, ಮೊಸರು, ಜೇನುತುಪ್ಪ, ಶ್ರೀಗಂಧ ಮತ್ತು ವಿವಿಧ ಹಣ್ಣಿನ ರಸಗಳಿಂದ ಅಭಿಷೇಕ ಮಾಡಲಾಯಿತು. ಸಂಜೆ 5.30ರಿಂದ 6ರವರೆಗೆ ಸ್ವಾಮಿಗೆ ಊಂಜಾಲ್ ಸೇವೆ ನಡೆಯಿತು. ಸಂಜೆ 7ರಿಂದ 9ರವರೆಗೆ ಸ್ವಾಮಿಯು ಅಶ್ವವಾಹನದಲ್ಲಿ ಭಕ್ತರಿಗೆ ದರ್ಶನ ನೀಡಿದನು.

ಇ-ಪೇಪರ್: www.munjaneevartheepaper.com
ಸ್ಥಳೀಯ

# ಬಾಹುಬಲಿಗೆ ಧ್ವನಿ ನೀಡಿದ್ದು ಖುಷಿ ತಂದಿದೆ-ಶರದ್ ಕೇಲ್ಕರ್

ಬೆಂಗಳೂರು: ಬಾಹುಬಲಿ ಮತ್ತು ಮಾಹಿಷ್ಮತಿಯ ಜಗತ್ತಿನಲ್ಲಿ ಇದೂವರೆಗೂ ಕೇಳಿರದ, ಕಂಡಿರದ ಹಾಗೂ ತಿಳಿಯಲಾಗದಿದ್ದ ಅನೇಕ ಘಟನೆಗಳು ಕಥೆಗಳು ಇವೆ.

ಮೂಲತ: ನಟರಾಗಿರುವ ಶರದ್ ಕೇಲ್ಕರ್ ಐತಿಹಾಸಿಕ ಪ್ರಾಜೆಕ್ಟ್‌ಗಳಿಗೆ ಧ್ವನಿ ನೀಡಿ ಖ್ಯಾತರಾಗಿದ್ದಾರೆ. ಇವರು ಸದ್ಯ ಬಾಹುಬಲಿ ನಾಯಕ ಪ್ರಭಾಸ್‌ಗೆ ಕಂಠದಾನ ಮಾಡಿರುವುದು ವಿಶೇಷ. ಈ ಕುರಿತಂತೆ ಅವರು ಖುಷಿಯನ್ನು ಹಂಚಿಕೊಂಡಿದ್ದಾರೆ.

ಮೊದಲು ನಾನೊಬ್ಬ ನಟ. ಉತ್ತಮವಾಗಿ ಅಭಿನಯಿಸಬಲ್ಲೆ. ವಿವಿಧ ಬಗೆಯ ಪಾತ್ರಗಳನ್ನು ಮಾಡುತ್ತಾ ಬಂದಿದ್ದೇನೆ. ಆದರೂ ಒಳ್ಳೆಯ ಕಾಲಕ್ಕೆ ಕಾಯುತ್ತಿದ್ದೇನೆ. ಅತ್ಯುತ್ತಮವಾದದು ಇನ್ನು ಬರಬಹುದು ಅಂತ ನಿರೀಕ್ಷೆಯಲ್ಲಿದ್ದೇನೆ. ಧ್ವನಿ ನೀಡುವಾಗ



ಯಾವ ಆಯಾಮಕ್ಕೂ ತೆಗೆದುಕೊಂಡು ಹೋಗಬಲ್ಲೆ.

ಬಾಹುಬಲಿಗೆ ಧ್ವನಿಯನ್ನಾಗಿ ಮಾಡಿದ ರಾಜಮೌಳಿ ಸರ್‌ಗೆ ಕೀರ್ತಿ ಸಲ್ಲಬೇಕು. ಪಾತ್ರಕ್ಕೆ ಕಲ್ಪಿಸುವಂತೆ ಡಬ್ ಮಾಡಲು ಸ್ವಾತಂತ್ರ್ಯ ನೀಡಿದರು. ಮೊದಲ ಭಾಗದಲ್ಲೇ ಸಂಜೆ ಬಂದು ಎಲ್ಲಾ ಡಬ್‌ಗಳನ್ನು ಪರೀಕ್ಷಿಸುತಿದ್ದರು.

ಎರಡನೇ ಭಾಗದ ಡಬ್ಬಿಂಗ್ ನಡೆಯುವಾಗ ಬಾರದೆ, ನನ್ನ ಮೇಲೆ ಸಂಪೂರ್ಣ ವಿಶ್ವಾಸ ತೆಗೆದುಕೊಂಡಿದ್ದರು.

ಗಯ್ಸ್ ನಿಮ್ಮ ಕೆಲಸ ಮಾಡಿ ಎಂದು ಹೇಳುತ್ತಿದ್ದರು. ಅಂತಹವರಿಂದ ಶಹಬ್ಬಾಸ್ ಅನ್ನಿಸಿಕೊಂಡಿದ್ದು ಮರೆಯಲಾಗದ ಅನುಭವ ಎನ್ನುತ್ತಾರೆ.

ಎ ಗ್ರಾಫಿಕ್ ಇಂಡಿಯಾ ಮತ್ತು ಆರ್ಕ ಮೀಡಿಯಾ ವರ್ಕ್ಸ್ ಪ್ರೊಡಕ್ಷನ್ ಅಡಿಯಲ್ಲಿ ಎಸ್.ಎಸ್.ರಾಜಮೌಳಿ-ಶರದ್‌ದೇವರಾಜನ್ ಕ್ರಿಯೆಟೀವ್ ಮುಖ್ಯಸ್ಥರಾಗಿರುತ್ತಾರೆ.

ಜೀವನ್.ಜೆ.ಕಾಂಗ್-ನವೀನ್ ಜಾನ್ ಜಂಟಿಯಾಗಿ ನಿರ್ದೇಶನ ಮಾಡಿದ್ದಾರೆ. ಇವರೆಲ್ಲರೂ ನಿರ್ಮಾಣದಲ್ಲಿ ಪಾಲುದಾರರಾಗಿರುತ್ತಾರೆ.

ಪವರ್ ಪ್ಯಾಕ್ಡ್ ಆಕ್ಷನ್ ಸೀರೀಸ್‌ದಲ್ಲಿ ಡಿಸ್ನಿ+ಹಾಟ್‌ಸ್ಟಾರ್‌ದಲ್ಲಿ ವೀಕ್ಷಿಸಬಹುದು.

# 24ರಿಂದ ಲಾಸಿಯಾ 2024 ಕಾರ್ಯಕ್ರಮ

ಬೆಂಗಳೂರು: ಕಡಿಮೆ ವೋಲ್ಟೇಜ್ ಎಲೆಕ್ಟ್ರಿಕಲ್ ಉತ್ಪನ್ನಗಳಲ್ಲಿ ಜಾಗತಿಕ ಮುಂಚೂಣಿಯಲ್ಲಿರುವ ಡೆಲಿಕ್ಸಿ ಎಲೆಕ್ಟ್ರಿಕ್ ಇಂದು ಪವರ್ ಎಲೆಕ್ಟ್ರಿಕಲ್ ಮತ್ತು ಲೈಟಿಂಗ್‌ನ 10ನೇ ಅಂತರರಾಷ್ಟ್ರೀಯ ಪ್ರದರ್ಶನವಾದ ಎಲಾಸಿಯಾ 2024 ರಲ್ಲಿ ತನ್ನ ಭಾಗವಹಿಸುವಿಕೆಯನ್ನು ಪ್ರಕಟಿಸಿದೆ. ಪ್ರದರ್ಶನವು ಮೇ 24–26, 2024 ರ ವರೆಗೆ ಬೆಂಗಳೂರಿನ ಅಂತರರಾಷ್ಟ್ರೀಯ ವಸ್ತುಪ್ರದರ್ಶನ ಕೇಂದ್ರದಲ್ಲಿ ನಡೆಯಲಿದೆ.

ಡೆಲಿಕ್ಸಿ ಎಲೆಕ್ಟ್ರಿಕ್ ಅನ್ನು 2023 ರಲ್ಲಿ ಭಾರತದಲ್ಲಿ ಪ್ರಾರಂಭಿಸಲಾಯಿತು. ಬ್ರ್ಯಾಂಡ್ ತನ್ನ ಸುಧಾರಿತ ವಿದ್ಯುತ್ ವಿತರಣೆ ಮತ್ತು ಕೈಗಾರಿಕಾ ನಿಯಂತ್ರಣ ಉತ್ಪನ್ನಗಳನ್ನು ಈವೆಂಟ್‌ಗೆ ತರುತ್ತದೆ. ಇದು 1,400 ಪೇಟೆಂಟ್‌ಗಳು, ಮೂರು ಅತ್ಯಾಧುನಿಕ ಪ್ರಯೋಗಾಲಯಗಳು ಮತ್ತು ಚೀನಾದಲ್ಲಿ ಐದು ಮೀಸಲಾದ ಸಂಶೋಧನೆ ಮತ್ತು ಅಭಿವೃದ್ಧಿ ಕೇಂದ್ರಗಳನ್ನು ಹೊಂದಿದೆ, ಇದು 60 ಕ್ಕೂ ಹೆಚ್ಚು ಉದ್ಯಮ ಮಾನದಂಡಗಳ ಅಭಿವೃದ್ಧಿಗೆ ಕೊಡುಗೆ ನೀಡುತ್ತದೆ. ಎಲಾಸಿಯಾ 2024 ರಲ್ಲಿ ಡೆಲಿಕ್ಸಿ ಎಲೆಕ್ಟ್ರಿಕ್ ಭಾಗವಹಿಸುವಿಕೆಯು ಭಾರತದಲ್ಲಿ ಬಲವಾದ




ಅಸ್ತಿತ್ವವನ್ನು ಸ್ಥಾಪಿಸುವ ಪ್ರಯಾಣದಲ್ಲಿ ಮಹತ್ವದ ಮೈಲಿಗಲ್ಲನ್ನು ಸೂಚಿಸುತ್ತದೆ. ಪ್ರದರ್ಶನಕ್ಕೆ ಭೇಟಿ ನೀಡುವವರು ಅತ್ಯಾಧುನಿಕ ಸ್ಮಾರ್ಟ್ ಮತ್ತು ಕಾರ್ಬನ್–ತಟಸ್ಥ ಸೌಲಭ್ಯಗಳಲ್ಲಿ ತಯಾರಿಸಿದ ಬ್ರ್ಯಾಂಡ್‌ನ ಶ್ರೇಣಿಯ ಉತ್ಪನ್ನಗಳನ್ನು ಅನ್ವೇಷಿಸಲು ಅವಕಾಶವನ್ನು ಹೊಂದಿರುತ್ತಾರೆ.

ಬ್ರ್ಯಾಂಡ್ ತನ್ನ ವೈವಿಧ್ಯಮಯ ಪೋರ್ಟ್‌ಫೋಲಿಯೊವನ್ನು ಪ್ರದರ್ಶಿಸುತ್ತದೆ, ಪ್ಯಾನಲ್ ಬಿಲ್ಡರ್‌ಗಳು, ಮೂಲ ಸಲಕರಣೆ ತಯಾರಕರು (ಒಇಎಂ ಗಳು), ಮತ್ತು ವಸತಿ ಮತ್ತು ವಾಣಿಜ್ಯ ಡೆವಲಪರ್‌ಗಳ ಅಗತ್ಯಗಳನ್ನು ಪೂರೈಸಲು ವಿನ್ಯಾಸಗೊಳಿಸಲಾಗಿದೆ, ವ್ಯಾಪಕ ಶ್ರೇಣಿಯ ಅಪ್ಲಿಕೇಶನ್‌ಗಳಿಗೆ ಉತ್ತಮ–ಗುಣಮಟ್ಟದ ಪರಿಹಾರಗಳನ್ನು ನೀಡುವ ಡೆಲಿಕ್ಸಿ ಎಲೆಕ್ಟ್ರಿಕ್‌ನ ಸಾಮರ್ಥ್ಯವನ್ನು ಎತ್ತಿ ತೋರಿಸುತ್ತದೆ.

ಎಲಾಸಿಯಾ 2024 ರಲ್ಲಿ ಬ್ರ್ಯಾಂಡ್‌ನ ಭಾಗವಹಿಸುವಿಕೆಯ ಮಹತ್ವವನ್ನು ಒತ್ತಿಹೇಳುತ್ತಾ, ಡೆಲಿಕ್ಸಿ ಎಲೆಕ್ಟ್ರಿಕ್‌ನ ಸಾಗರೋತ್ತರ ಮಾರುಕಟ್ಟೆ ಮತ್ತು ಸಂವಹನ ನಾಯಕಿ ವಿಭಾ ಥುಸು, "ಡೆಲಿಕ್ಸಿ ಎಲೆಕ್ಟ್ರಿಕ್ ತನ್ನ ದೃಢವಾದ ವಿದ್ಯುತ್ ವಿತರಣೆ ಮತ್ತು ಕೈಗಾರಿಕಾ ನಿಯಂತ್ರಣ ಪೋರ್ಟ್‌ಫೋಲಿಯೊ ಮೂಲಕ ಭಾರತಕ್ಕೆ ಭರವಸೆಯನ್ನು ಹೊಂದಿದೆ, ಅದು ಇಂದಿನ ಸ್ಪರ್ಧಾತ್ಮಕವಾಗಿ ಅಭಿವೃದ್ಧಿ ಹೊಂದಲು ಅಧಿಕಾರ ನೀಡುತ್ತದೆ. ಎಲಾಸಿಯಾ 2024 ರಲ್ಲಿ ನಮ್ಮ ಚೊಚ್ಚಲ ನೋಟವು ಭಾರತದ ಬೆಳವಣಿಗೆಯ ಕಥೆಯಲ್ಲಿ ವಿಶ್ವಾಸಾರ್ಹ ಪಾಲುದಾರರಾಗಲು ನಮ್ಮ ಸಮರ್ಪಣೆಯನ್ನು ಒತ್ತಿಹೇಳುತ್ತದೆ." ಎಂದು ಹೇಳಿದ್ದಾರೆ.



ಸಮಾಜಕ್ಕಾಗಿ ತಮ್ಮ ಅಚಲ ಬದ್ಧತೆಯಲ್ಲಿ ಹ್ಯುಂಡಾಯ್ ಮೋಟಾರ್ ಇಂಡಿಯಾ ಲಿಮಿಟೆಡ್(ಎಚ್‌ಎಂಐಎಲ್) ತಮ್ಮ ಪ್ರಥಮ 'ಸಮರ್ಥ್ ಸಹಾಯಕ ಸಾಧನಗಳ ಸಮಾವೇಶ' ವನ್ನು ಆಯೋಜಿಸಿತ್ತು. ಹ್ಯುಂಡಾಯ್ ಮೋಟಾರ್ ಇಂಡಿಯಾದ 'ಸಮರ್ಥ್' ಸಾಮಾಜಿಕ ಉಪಕ್ರಮದ ಅಡಿಯಲ್ಲಿ ವಿನ್ಯಾಸಗೊಳಿಸಲಾದ ಈ ಕಾರ್ಯಕ್ರಮ ಸಬಲೀಕರಣಕ್ಕಾಗಿ ತಂತ್ರಜ್ಞಾನವನ್ನು ಬಳಸುವ ಸಂಸ್ಥೆಯ ಬದ್ಧತೆಯನ್ನು ಪ್ರದರ್ಶಿಸಿದೆ. ತಮ್ಮ ಪಾಲುದಾರರಾದ ಹಾಗೂ ವಿಕಲಚೇತನರಿಗಾಗಿ ಕೆಲಸ ಮಾಡುತ್ತಿರುವ ಸರ್ಕಾರೇತರ ಸಂಸ್ಥೆ ಸಮರ್ಥನಮ್ ಟ್ರಸ್ಟ್‌ನೊಂದಿಗೆ ಸಹಭಾಗಿತ್ವದಲ್ಲಿ ಹ್ಯುಂಡಾಯ್ ಮೋಟಾರ್ ಇಂಡಿಯಾ 72ಕ್ಕೂ ಹೆಚ್ಚಿನ ಸಂಖ್ಯೆಯ ಉನ್ನತಮಟ್ಟದ ಸಹಾಯಕ ಸಾಧನಗಳನ್ನು ಹ್ಯುಂಡಾಯ್ ಮೋಟಾರ್ ಇಂಡಿಯಾ ಪ್ರತಿಷ್ಠಾನ ಮತ್ತು ಸಮರ್ಥನಮ್ ಟ್ರಸ್ಟ್ ತಮ್ಮ ಸಮರ್ಥ್ ಸಹಾಯಕ ಸಾಧನಗಳ ಕಾರ್ಯಕ್ರಮದ ಅಡಿಯಲ್ಲಿ ಹಸ್ತಾಂತರಿಸಿದೆ.



## ಮಹತ್ವದ ಮೈಲಿಗಲ್ಲು ಸಾಧಿಸಿದ ವರ್ಕ್ ಇಂಡಿಯಾ

ಬೆಂಗಳೂರು: ವರ್ಕ್‌ಇಂಡಿಯಾ ಬ್ಲೂ ಕಾಲರ್ ಉದ್ಯೋಗಾಕಾಂಕ್ಷಿಗಳಿಗಾಗಿ ಭಾರತದ ಪ್ರಮುಖ ಪ್ಲಾಟ್‌ಫಾರಂ, ದೇಶದ 258 ಮಿಲಿಯನ್ ಬ್ಲೂ ಕಾಲರ್ ಉದ್ಯೋಗಿಗಳಿಗೆ ಅರ್ಥಪೂರ್ಣ ಜೀವನೋಪಾಯವನ್ನು ಒದಗಿಸುವ ತನ್ನ ಕಾರ್ಯಾಚರಣೆಯಲ್ಲಿ ಮಹತ್ವದ ಮೈಲಿಗಲ್ಲನ್ನು ಸಾಧಿಸಿರುವುದಾಗಿ ಪ್ರಕಟಿಸಿದೆ.

> ವರ್ಕ್‌ಇಂಡಿಯಾ ತೆಗೆದುಕೊಂಡ ಪೂರ್ವಭಾವಿ ಕ್ರಮಗಳು ಮೋಸ, ಅಸಭ್ಯ ಅಥವಾ ಶುಲ್ಕ ವಿಧಿಸುವ ಉದ್ಯೋಗ ಲಿಸ್ಟಿಂಗ್‌ಗಳನ್ನು ಪೋಸ್ಟ್ ಮಾಡಲು ಪ್ರಯತ್ನಿಸಿದ 3,000ಕ್ಕೂ ಹೆಚ್ಚು ಉದ್ಯೋಗದಾತರನ್ನು ನಿರ್ಬಂಧಿಸಿದೆ.

ಏಪ್ರಿಲ್ ತಿಂಗಳೊಂದರಲ್ಲೇ, ವರ್ಕ್‌ಇಂಡಿಯಾ ಪ್ಲಾಟ್‌ಫಾರ್ಮ್‌ನಲ್ಲಿ ಪೋಸ್ಟ್ ಮಾಡಲಾದ 97% ಉದ್ಯೋಗಗಳನ್ನು ನಿಜವಾದ ಉದ್ಯೋಗಾವಕಾಶಗಳೆಂದು ಗುರುತಿಸಲಾಗಿದೆ ಮತ್ತು ಪರಿಶೀಲಿಸಲಾಗಿದೆ. ಇದು ಮೋಸದ ಉದ್ಯೋಗ ಪೋಸ್ಟಿಂಗ್‌ಗಳ ಸಮಸ್ಯೆಯನ್ನು ಎದುರಿಸಲು ವೇದಿಕೆಯ ಬದ್ಧತೆಯನ್ನು ಒತ್ತಿಹೇಳುತ್ತದೆ.

ಮೋಸದ ಉದ್ಯೋಗ ಪೋಸ್ಟಿಂಗ್‌ಗಳು ಬ್ಲೂ ಕಾಲರ್ ಕೆಲಸಗಾರರಿಗೆ ಗಣನೀಯ ಸವಾಲನ್ನು ಉಂಟುಮಾಡುತ್ತವೆ. ಅದರಲ್ಲೂ ವಿಶೇಷವಾಗಿ, ಈ ವಿಭಾಗದಲ್ಲಿ ಸಾಕ್ಷರತೆ ಕಡಿಮೆ ಇರುವ ಹಿನ್ನೆಲೆಯಲ್ಲಿ ಈ ಸಮಸ್ಯೆ ಹೆಚ್ಚು ವ್ಯಾಪಕವಾಗಿದೆ. ಈ ಸಮಸ್ಯೆಯನ್ನು ಗುರುತಿಸಿ, ವರ್ಕ್‌ಇಂಡಿಯಾ ತನ್ನ ಪ್ಲಾಟ್‌ಫಾರ್ಮ್‌ನಲ್ಲಿ ಉದ್ಯೋಗ ಲಿಸ್ಟಿಂಗ್‌ಗಳ ದೃಢೀಕರಣವನ್ನು ಖಚಿತಪಡಿಸಿಕೊಳ್ಳಲು ಬಲಿಷ್ಠವಾದ ತಾಂತ್ರಿಕ ಪರಿಹಾರಗಳನ್ನು ಜಾರಿಗೆ ತಂದಿದೆ. ಏಪ್ರಿಲ್‌ನಲ್ಲಿ, ಕೇವಲ 3% ಉದ್ಯೋಗ ಪೋಸ್ಟಿಂಗ್‌ಗಳನ್ನು ಫ್ಲ್ಯಾಗ್ ಮಾಡಿ, ವಂಚನೆ ಎಂದು ನಿರ್ಬಂಧಿಸಲಾಗಿದೆ.

ವರ್ಕ್‌ಇಂಡಿಯಾ ತೆಗೆದುಕೊಂಡ ಪೂರ್ವಭಾವಿ ಕ್ರಮಗಳು ಮೋಸ, ಅಸಭ್ಯ ಅಥವಾ ಶುಲ್ಕ ವಿಧಿಸುವ ಉದ್ಯೋಗ ಲಿಸ್ಟಿಂಗ್‌ಗಳನ್ನು ಪೋಸ್ಟ್ ಮಾಡಲು ಪ್ರಯತ್ನಿಸಿದ 3,000ಕ್ಕೂ ಹೆಚ್ಚು ಉದ್ಯೋಗದಾತರನ್ನು ನಿರ್ಬಂಧಿಸಿದೆ.

ಇಂತಹ ಉದ್ಯೋಗದಾತರು ಒಟ್ಟು 8,700 ನಕಲಿ ಉದ್ಯೋಗಗಳನ್ನು ಪೋಸ್ಟ್ ಮಾಡಲು ಪ್ರಯತ್ನಿಸಿದ್ದರು. ಇದು ವರ್ಕ್‌ಇಂಡಿಯಾ ಪರಿಹರಿಸುತ್ತಿರುವ ಸಮಸ್ಯೆಯ ಪ್ರಮಾಣವನ್ನು ಎತ್ತಿ ತೋರಿಸುತ್ತದೆ.

ಈ ಕುರಿತು ವರ್ಕ್‌ಇಂಡಿಯಾದ ಸಹ–ಸಂಸ್ಥಾಪಕ ಮತ್ತು ಸಿಇಒ ಆಗಿರುವ ನಿಲೇಶ್ ಡುಂಗರ್ವಾಲ್ ಪ್ರತಿಕ್ರಿಯಿಸುತ್ತಾ, "ವರ್ಕ್‌ಇಂಡಿಯಾ ಅಸ್ತಿತ್ವದ ಉದ್ದೇಶವು ಭಾರತದ 258 ಮಿಲಿಯನ್ ಬ್ಲೂ ಕಾಲರ್ ಕಾರ್ಮಿಕರಿಗೆ ಅರ್ಥಪೂರ್ಣ ಜೀವನೋಪಾಯವನ್ನು ಒದಗಿಸುವುದಾಗಿದೆ. ಈ ವಿಭಾಗವು ವಿಶ್ವದ ಏಕೈಕ ಅತಿದೊಡ್ಡ ಉದ್ಯೋಗಿಗಳನ್ನು ಪ್ರತಿನಿಧಿಸುತ್ತದೆ. ಇದಕ್ಕೆ ಇನ್ನೂ ತಂತ್ರಜ್ಞಾನದ ಅನುಕೂಲ ಲಭ್ಯವಾಗಿಲ್ಲ. ನಮ್ಮ ವೇದಿಕೆಯು ಮಧ್ಯವರ್ತಿಗಳು, ಮೋಸದ ಉದ್ಯೋಗ ಪೋಸ್ಟಿಂಗ್‌ಗಳು ಮತ್ತು ಅಸಭ್ಯ ಪಟ್ಟಿಗಳನ್ನು ನಿವಾರಣೆ ಮಾಡುವುದಕ್ಕೆ ತಂತ್ರಜ್ಞಾನ ಬಳಕೆಗೆ ಬದ್ಧವಾಗಿದೆ.

ಇದರಿಂದಾಗಿ ನಿಜವಾದ ಉದ್ಯೋಗಾವಕಾಶಗಳನ್ನು ಹುಡುಕಲು ವಿಶ್ವಾಸಾರ್ಹ ವೇದಿಕೆಯನ್ನು ಉದ್ಯೋಗಾಕಾಂಕ್ಷಿಗಳಿಗೆ ಒದಗಿಸುತ್ತದೆ.

## ಇಂಟೆಲೆಕ್ಟ್ ಡಿಜಿಟಲ್ ಕೋರ್ ಪ್ರಾರಂಭ

ಬೆಂಗಳೂರು: ಇಂಟೆಲೆಕ್ಟ್ ಡಿಸೈನ್ ಅರೆನಾ ಲಿಮಿಟೆಡ್ ಕ್ಲೌಡ್–ಸ್ಥಳೀಯ, ಭವಿಷ್ಯದ–ಸಿದ್ಧ, ಬಹು–ಉತ್ಪನ್ನ ಹಣಕಾಸು ತಂತ್ರಜ್ಞಾನ ಕಂಪನಿಯು ವಿಶ್ವದ ಪ್ರಮುಖ ಬ್ಯಾಂಕಿಂಗ್ ಮತ್ತು ವಿಮಾ ಗ್ರಾಹಕರಿಗಾಗಿ, ಸಹಕಾರಿ ಬ್ಯಾಂಕ್‌ಗಳಿಗಾಗಿ ಇಂಟೆಲೆಕ್ಟ್ ಡಿಜಿಟಲ್ ಕೋರ್ ಅನ್ನು ಪ್ರಾರಂಭಿಸಿದ್ದಾಗಿ ಪ್ರಕಟಿಸಿದೆ. ಭಾರತ. ಈ ಸಮಗ್ರ, ಎಂಟರ್‌ಪ್ರೈಸ್–ಗ್ರೇಡ್ ಬ್ಯಾಂಕಿಂಗ್ ತಂತ್ರಜ್ಞಾನ ಸೂಟ್ ಇಮ್ಯಾಚ್ ಎಐ ನಿಂದ ಸಂಯೋಜಿಸಲ್ಪಟ್ಟಿದೆ, ಇದು ಭವಿಷ್ಯದ–ಸಿದ್ಧ ತಂತ್ರಜ್ಞಾನ ಪರಿಹಾರಗಳನ್ನು ವಿನ್ಯಾಸಗೊಳಿಸಲು ಹಣಕಾಸು ಸಂಸ್ಥೆಗಳಿಗೆ 'ಫಸ್ಟ್ ಪ್ರಿನ್ಸಿಪಲ್ಸ್' ಥಿಂಕಿಂಗ್‌ನಿಂದ ವಿನ್ಯಾಸಗೊಳಿಸಲಾದ ವಿಶ್ವದ ಅತಿದೊಡ್ಡ ಮುಕ್ತ ಹಣಕಾಸು ವೇದಿಕೆಯಾಗಿದೆ. ಪ್ರಪಂಚದ ಕೆಲವು ದೊಡ್ಡ ಬ್ಯಾಂಕ್‌ಗಳನ್ನು ನಡೆಸುತ್ತಿರುವ ಸಂಯೋಜಿತ ಮತ್ತು ಸಾಂದರ್ಭಿಕ ಕೋರ್ ಬ್ಯಾಂಕಿಂಗ್ ತಂತ್ರಜ್ಞಾನದ ಮೇಲೆ ಚಿತ್ರಿಸುತ್ತಾ, ಇಂಟೆಲೆಕ್ಟ್ ಡಿಜಿಟಲ್ ಇಂಡಿಯಾ ಉಪಕ್ರಮವಾಗಿ ಸಹಕಾರಿ ಬ್ಯಾಂಕ್‌ಗಳಿಗೆ ಅದೇ ಪರಿಣತಿಯನ್ನು ತರುತ್ತದೆ.

intellect
live your dream

ಮೂರು ದಶಕಗಳ ಡೊಮೇನ್ ಪರಿಣತಿ ಮತ್ತು ನಮ್ಮ ಅಂತರಂಗದಲ್ಲಿ 'ಡಿಸೈನ್ ಥಿಂಕಿಂಗ್', ನಾವು ಸಹಕಾರಿ ಬ್ಯಾಂಕ್‌ಗಳಿಗೆ ಅನುಗುಣವಾಗಿ ಇಂಟೆಲೆಕ್ಟ್ ಡಿಜಿಟಲ್ ಕೋರ್ ಅನ್ನು ಪ್ರಾರಂಭಿಸಿದ್ದೇವೆ.

ಸಮಕಾಲೀನ ಬ್ಯಾಂಕಿಂಗ್ ಭೂದೃಶ್ಯದಲ್ಲಿ, ಗ್ರಾಹಕರ ನಿರೀಕ್ಷೆಗಳು ವಿಕಸನಗೊಂಡಿವೆ ಮತ್ತು ಅವರು ಈಗ ಅವರು ತೊಡಗಿಸಿಕೊಂಡಿರುವ ಬ್ಯಾಂಕ್‌ಗಳಿಂದ ಡಿಜಿಟಲ್ ಫ್ರಂಟ್–ಎಂಡ್ ಲೇಯರ್‌ಗಳನ್ನು ಬಯಸುತ್ತಾರೆ. ಇದು ಯುಪಿಐ ವಹಿವಾಟುಗಳನ್ನು ನಿರ್ವಹಿಸುವ ಮತ್ತು ಇಂಟರ್‌ನೆಟ್ ಬ್ಯಾಂಕಿಂಗ್ ಸೇವೆಗಳನ್ನು ನಿಯಂತ್ರಿಸುವ ಸಾಮರ್ಥ್ಯವನ್ನು ಒಳಗೊಂಡಿದೆ. ಈ ಮೌಲ್ಯವರ್ಧಿತ ಸೇವೆಗಳನ್ನು ಒದಗಿಸುವ ಮೂಲಕ ಯುವ ಪೀಳಿಗೆಯ ಗ್ರಾಹಕರ ಆಕಾಂಕ್ಷೆಗಳನ್ನು ಪೂರೈಸಲು ಸಹಕಾರಿ ಬ್ಯಾಂಕ್‌ಗಳಿಗೆ ಅನಿವಾರ್ಯವಾಗಿದೆ. ‸ಸಹಕಾರಿ ಬ್ಯಾಂಕ್‌ಗಳಿಗೆ ಡಿಜಿಟಲ್ ಕೋರ್ ಡಿಜಿಟಲ್ ರೂಪಾಂತರವನ್ನು ಅಳವಡಿಸಿಕೊಳ್ಳಲು ಮತ್ತು ವಿಕಸನಗೊಳ್ಳುತ್ತಿರುವ ಗ್ರಾಹಕರ ಉಳಿಯಲು ಆಧುನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಅನುವು ಮಾಡಿಕೊಡುತ್ತದೆ.



## *ಡಿಸೇಲ್ ಖಾಲಿ ಆಗಿ ರಸ್ತೆ ಮಧ್ಯ ನಿಂತ KSRTC ಬಸ್, ಮಾನವೀಯತೆ ಮೆರೆದ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ನಗರನಿತಿನ್....!

ಹೊಸನಗರ :- ನಿನ್ನೆ ಬೆಂಗಳೂರಿನಿಂದ ಶಿವಮೊಗ್ಗದ ಮಾಸ್ತಿಕಟ್ಟೆ ಸಮೀಪದ ಹುಲಿಕಲ್ ಘಾಟ್ ಮೂಲಕ ಕುಂದಾಪುರ ಕಡೆ ಹೋಗುತ್ತಿದ್ದ ಕೆ.ಎಸ್ ಆರ್. ಟಿ. ಸಿ. ಬಸ್ ಡಿಸೇಲ್ ಖಾಲಿ ಆಗಿ ರಸ್ತೆ ಮಧ್ಯ ನಿಂತಿದೆ.ಈ ಸಂದರ್ಭದಲ್ಲಿ ಪ್ರಯಾಣಿಕರ ನೆರವಿಗೆ ಬಂದ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ನಗರ ನಿತಿನ್ ಡಿಪೋ ಮ್ಯಾನೇಜರ್ ಗೆ ಕರೆ ಮಾಡಿ. ಇದೇ ವೇಳೆ 98 ಪ್ರಯಾಣಿಕರ ಹೊತ್ತ ಕೆ ಎಸ್. ಆರ್. ಟಿ ಸಿ ಬಸ್ ಸುಮಾರು ಒಂದುವರೆ ಗಂಟೆ ಕಾಲ. ನಂತರ ಬೇರೆ ಖಾಸಗಿ ಬಸ್ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿಯವರೆಗೂ ಪ್ರಯಾಣಿಕರ ಸುರಕ್ಷತೆಗೆ ನಿಂತಿದ್ದು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ನಗರ ನಿತಿನ್.

ವರದಿ. ತನುಜ್ ಕುಮಾರ್. ಹೊಸನಗರ

## ಎಂಎಲ್ಸಿ ಸ್ಥಾನಕ್ಕೆ ನನ್ನ ಸೇವಾ ಹಿರಿತನವನ್ನು ಪರಿಗಣಿಸುವಂತೆ ಸಿಎಂಗೆ ಮನವಿ ಮಾಡಿದ ಊರಬಾಗಿಲು ಶ್ರೀನಿವಾಸ್

ಕೋಲಾರ: ಮುಂದಿನ ಜೂನ್ ತಿಂಗಳಿನಲ್ಲಿ ವಿಧಾನಸಭೆಯಿಂದ ವಿಧಾನಪರಿಷತ್‌ಗೆ ನಡೆಯಲಿರುವ ಚುನಾವಣೆಯಲ್ಲಿ ಜಿಲ್ಲೆಯ ಹಿರಿಯ ಸಹಕಾರಿ ಧುರೀಣ ಮಾಜಿ ಸಚಿವ ಕೆ.ಶ್ರೀನಿವಾಸಗೌಡ ಅವರಿಗೆ ಅವಕಾಶ ನೀಡಬೇಕು ಒಂದು ವೇಳೆ ಕಿರಿಯರನ್ನು ಪರಿಗಣಿಸುವುದಾದರೆ ನನ್ನನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಮಾಡುವಂತೆ ಜಿಲ್ಲಾ ಕಾಂಗ್ರೆಸ್ ಕಾರ್ಯಾಧ್ಯಕ್ಷ ಊರಬಾಗಿಲು ಶ್ರೀನಿವಾಸ್ ಗುರುವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು, ಸಚಿವ ಕೆ.ಹೆಚ್ ಮುನಿಯಪ್ಪ ಅವರೊಂದಿಗೆ ಭೇಟಿ ಮಾಡಿ ಮನವಿ ಮಾಡಿದರು.

ಮಾಜಿ ಸಚಿವ ಕೆ.ಶ್ರೀನಿವಾಸಗೌಡರು ಕೋಲಾರ ಜಿಲ್ಲೆಯ ಸಹಕಾರಿ ವ್ಯವಸ್ಥೆಯನ್ನು ಬಲಪಡಿಸಲು ಸಾಕಷ್ಟು ಶ್ರಮವನ್ನು ವಹಿಸಿದ್ದಾರೆ ತಮ್ಮ ಇಫ್ಕೋ ಸಂಸ್ಥೆಯ ವತಿಯಿಂದ ರೈತರಿಗೆ ಹಾಗೂ ವಿಧ್ಯಾರ್ಥಿಗಳಿಗೆ ಆರ್ಥಿಕವಾಗಿ ಸಹಾಯ ಮಾಡಿದ್ದು ಜನಪರವಾದ ಕಾಳಜಿಯುಳ್ಳ ನಾಯಕರಾಗಿದ್ದಾರೆ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡುವುದು ಅಗತ್ಯವಾಗಿದೆ ರೈತರ ಪರ ಹೋರಾಟಗಳ



ಮೂಲಕವೇ ತಾಲೂಕು ಪಂಚಾಯಿತಿಯಿಂದ ಸಚಿವ ಸ್ಥಾನದವರೆಗೂ ಅವರ ಪರಿಶ್ರಮದಿಂದ ಬೆಳೆದು ಬಂದು ಸಹಕಾರಿ ವ್ಯವಸ್ಥೆಯನ್ನು ಬಲಪಡಿಸಿದ್ದಾರೆ ಕಳೆದ ಬಾರಿ ಸಿಎಂ ಆಗುವ ಅವಕಾಶ ಸಿದ್ದರಾಮಯ್ಯ ಅವರಿಗೆ ಇದೆ ಎಂದು ಕೋಲಾರ ಕ್ಷೇತ್ರವನ್ನು ನಿಮಗೆ ಬಿಟ್ಟು ಕೊಟ್ಟಿದ್ದರು ಕೊನೆ ಗಳಿಗೆಯಲ್ಲಿ ನೀವು ಸ್ಪರ್ಧೆ ಮಾಡಲಿಲ್ಲ ಬೇರೆಯವರಿಗೆ ಕ್ಷೇತ್ರವನ್ನು ತ್ಯಾಗ ಮಾಡಿದ್ದಾರೆ ಅದರಿಂದಲೇ ಶ್ರೀನಿವಾಸಗೌಡರಿಗೆ ಒಂದು ಅವಕಾಶ ನೀಡಬೇಕು ಎಂದು ಮನವರಿಕೆ ಮಾಡಿಕೊಟ್ಟರು

ಒಂದು ವೇಳೆ ಕಾಂಗ್ರೆಸ್ ಪಕ್ಷವು ಕಿರಿತನದ ಆಧಾರದಲ್ಲಿ ಅವಕಾಶ ನೀಡುವುದಾದರೆ ಕೋಲಾರ ಜಿಲ್ಲಾ ಕಾಂಗ್ರೆಸ್ ಪಕ್ಷಕ್ಕೆ ಶಕ್ತಿಯಾಗಿ ಜಿಲ್ಲೆಯಲ್ಲಿ ಸಮರ್ಥವಾಗಿ ಪಕ್ಷವನ್ನು ಸಂಘಟನೆ ಮಾಡಿಕೊಂಡು ಬಂದಿದ್ದೇನೆ ಇದರಿಂದಾಗಿ ಜಿಲ್ಲೆಯಲ್ಲಿ ಹೆಚ್ಚಿನ ಕಾಂಗ್ರೆಸ್ ಶಾಸಕ ಸ್ಥಾನಗಳನ್ನು ಗೆಲ್ಲಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದೇನೆ ನಾನು ಕೂಡ ಮೂರು ಬಾರಿ ವಿಧಾನಸಭಾ ಕ್ಷೇತ್ರದ ಚುನಾವಣೆಗೆ ಆಕಾಂಕ್ಷೆ ಯಾಗಿದ್ದ ಕೋಲಾರ ಲೋಕಸಭಾ ಚುನಾವಣೆಯಲ್ಲಿ ಕೆಎಚ್ ಮುನಿಯಪ್ಪ ಏಳು ಬಾರಿ ಗೆಲುವು ಸಾಧಿಸಲು ಪ್ರಮುಖವಾಗಿ ಪಾತ್ರವನ್ನು ವಹಿಸಿದ್ದೇನೆ ಜಿಲ್ಲಾ ರೈತ ಮೋರ್ಚಾ ಅಧ್ಯಕ್ಷನಾಗಿ, ಡಿಸಿಸಿ ಬ್ಯಾಂಕ್ ನಿರ್ದೇಶಕನಾಗಿ, ನಗರಸಭೆ ಅಧ್ಯಕ್ಷನಾಗಿ ಕೆಲಸ ಮಾಡಿದ್ದು ನನ್ನ ಸೇವಾ ಹಿರಿತನವನ್ನು ಪರಿಗಣಿಸಿ ಮುಂದೆ ನಡೆಯುವ ಎಂಎಲ್ಸಿ ಸ್ಥಾನಗಳಿಗೆ ನನ್ನನ್ನು ಪರಿಗಣಿಸಬೇಕು ಎಂದು ಸಿಎಂ ಸಿದ್ದರಾಮಯ್ಯ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದಾರೆ.

## ಮನೆ ಬಾಗಿಲಿಗೆ ದಂಡದ ನೋಟಿಸ್

ತಿ.ನರಸೀಪುರ:–ರಸ್ತೆ ಸುರಕ್ಷತೆ ನಿಯಮಗಳನ್ನು ಪಾಲಿಸದ ವಾಹನ ಚಾಲಕರ ಮನೆ ಬಾಗಿಲಿಗೆ ದಂಡದ ನೋಟಿಸ್ ಬರಲಿದೆ ಎಂದು ತಿ.ನರಸೀಪುರ ಪಟ್ಟಣ ಠಾಣೆ ಪೋಲಿಸ್ ಇನ್ಸ್ಪೆಕ್ಟರ್ ಮೇದಪ್ಪ ಎಚ್ಚರಿಕೆಯ ಸಂದೇಶ ನೀಡಿದರು.

ಪಟ್ಟಣದ ವಿದ್ಯೋದಯ ಶಿಕ್ಷಣ ಸಂಸ್ಥೆಯ ಶಿವನಂದ ಶರ್ಮ ಸರ್ಕಲ್ ಬಳಿ ತಿ.ನರಸೀಪುರ ಪಟ್ಟಣದಲ್ಲಿ ಅಳವಡಿಸಿರುವ ಸಿ ಸಿ ಕ್ಯಾಮರಾಗಳ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯ ಕೈಗೊಂಡು ಮಾತನಾಡಿದ ಇನ್ಸ್ಪೆಕ್ಟರ್ ಮೇದಪ್ಪ ಜನರ ಸುರಕ್ಷತೆಯ ದೃಷ್ಟಿಯಿಂದ ಹಾಗೂ ರಸ್ತೆ



ನಿಯಮಗಳನ್ನು ಪಾಲಿಸದ ವಾಹನ ಸವಾರರ ವಿರುದ್ಧ ಕ್ರಮ ವಹಿಸಲು ಈ ಕ್ಯಾಮರಾಗಳು ಕೆಲಸ ಮಾಡಲಿದೆ ಎಂದರು.

ಹೆಲ್ಮೆಟ್ ಧರಸದೆ ವಾಹನ ಚಲಾಯಿಸುವವರು ಹಾಗೂ ಮದ್ಯಪಾನ ಮಾಡಿ ವಾಹನ ಚಲಾಯಿಸುವುದು, ನಿಗದಿತ ಸಾಮರ್ಥ್ಯಕ್ಕಿಂತ ಅಧಿಕ ಪ್ರಯಾಣಿಕರನ್ನು ಹೊತ್ತೊಯ್ಯುವುದು, ಅತೀ ವೇಗದ ಚಲಾವಣೆ, ಸರಕು ಸಾಗಾಟದ ವಾಹನದಲ್ಲಿ ಜನರ ಸಾಗಾಟ, ವಾಹನ ಚಾಲನೆ ಸಂದರ್ಭ ಮೊಬೈಲ್‌ನಲ್ಲಿ ಮಾತನಾಡುವುದು ಮೊದಲಾದ ರಸ್ತೆ ಸುರಕ್ಷತಾ ನಿಯಮಗಳನ್ನು ಉಲ್ಲಂಘಿಸುವವರಿಗೆ ದಂಡದ ನೋಟಿಸು ವಾಹನ ಮಾಲೀಕರ ಮನೆ ಬಾಗೀಲಿಗೆ ಹೋಗಲಿದೆ ಎಂದರು.

18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಅಪ್ರಾಪ್ತರು ಹಾಗೂ ಚಾಲನಾ ಪರವಾನಿಗೆ ಇಲ್ಲದೆ ಮೋಟಾರು ವಾಹನಗಳನ್ನು ಓಡಿಸುವ ಬಗ್ಗೆ ಪೋಷಕರು ಗಮನ ಹರಿಸಬೇಕು. ಅಪ್ರಾಪ್ತರು ವಾಹನ ಚಲಾಯಿಸುವುದು ಕಂಡು ಬಂದಲ್ಲಿ ಪೊಲೀಸರು ದಂಡ ಹಾಕುವ ಜತೆಗೆ ವಾಹನವನ್ನು ವಶಕ್ಕೆ ಪಡೆಯಲಿದ್ದಾರೆ ಆದರಿಂದ ವಾಹನ ಸವಾರರು ತಮ್ಮ ಜೀವದ ಉಳಿವಿಗೆ ಹಾಗೂ ಅವರ ಕುಟುಂಬದ ಉಳಿವೆಗೆ ರಸ್ತೆ ಸುರಕ್ಷತೆ ನಿಯಮ ಪಾಲಿಸಬೇಕು ಎಂದರು.

ಸದ್ಯಕ್ಕೆ ವಿದ್ಯೋದಯ ಶಿಕ್ಷಣ ಸಂಸ್ಥೆಯ ಶಿವನಂದ ಶರ್ಮ ವೃತ್ತ ಬಳಿ ಹಾಗೂ ನಂಜನಗೂಡು ಮುಖ್ಯ ರಸ್ತೆಯಲ್ಲಿ ಎರಡು ಕ್ಯಾಮರ ಹಾಗೂ ಹಳೇ ಸಂತೆ ಮಾಳದ ಅಂಬೇಡ್ಕರ್ ವೃತ್ತ ಹಾಗೂ ಮೂಗೂರು ಗ್ರಾಮದ ರಾಷ್ಟೀಯ ಹೆದ್ದಾರಿಯಲ್ಲಿ ಕ್ಯಾಮರಾ ಅಳವಡಿಸಲಾಗಿದೆ, ಮುಂದಿನ ದಿನಗಳಲ್ಲಿ ಪಟ್ಟಣದ ಇನ್ನೂ ಕೆಲವೆಡೆ ಸಿ.ಸಿ ಕ್ಯಾಮರಾ ಅಳವಡಿಸಲಾಗುವುದು ಎಂದರು.

## ಜಿ.ಪಂ,ತಾ.ಪಂ.ಚುನಾವಣೆಗೆ ಮಹೂರ್ತ!ಗರಿಗೆದರಿದ ರಾಜಕೀಯ ಚಟುವಟಿಕೆ...

ಧಾರವಾಡ: ಎರಡು ವರ್ಷಗಳಿಂದ ನೆನಗುದಿಗೆ ಬಿದ್ದಿದ್ದ ಜಿಲ್ಲಾ ಹಾಗೂ ತಾಲೂಕು ಪಂಚಾಯತ ಚುನಾವಣೆಗೆ ಬಹುತೇಕ ಮಹೂರ್ತ ಫಿಕ್ಸ್ ಆಗಿದ್ದು ಜಿಲ್ಲೆಯ ಏಳು ತಾಲೂಕುಗಳಲ್ಲಿ ರಾಜಕೀಯ ಚಟುವಟಿಕೆ ಗರಿಗೆದರಲಾರಂಬಿಸಿವೆ.

ಈ ಹಿಂದೆ ಜಿಲ್ಲೆಯಲ್ಲಿ 22 ಜಿ.ಪಂ. ಕ್ಷೇತ್ರಗಳಿದ್ದು ಈ ಬಾರಿ ಅವುಗಳ ಸಂಖ್ಯೆ 28 ಕ್ಕೆ ತಲುಪಲಿದ್ದು ಕ್ಷೇತ್ರ ಪುನರ್ ವಿಂಗಡನೆ,ಮೀಸಲಾತಿ ಪ್ರಕ್ರೀಯೆ ಮುಗಿದಿದ್ದು ಶೀಘ್ರದಲ್ಲಿಯೇ ಇವೆರಡರ ಗೆಜೆಟ್ ಹೊರಬೀಳುವ ಸಾದ್ಯತೆ ಇದೆ.

ರಾಜ್ಯ ಉಚ್ಚ ನ್ಯಾಯಾಲಯದ ಆದೇಶದ ನಡುವೆಯೂ ರಾಜಕೀಯ ಪಕ್ಷಗಳ ನಿರಾಸಕ್ತಿಯಿಂದ ಸ್ಥಳಿಯ ಸಂಸ್ಥೆಗಳ ಮೇಲೆ ಗ್ರಹಣ ಬಡಿದಿತ್ತು. ಇಗಾಗಲೇ ಜಿ.ಪಂ.ತಾಪಂ. ಚುನಾವಣೆ ಗಳು ನಡೆಯಬೇಕಿತ್ತಾದರೂ ಲೋಕಸಭಾ ಚುನಾವಣೆ ಸಹಿತ ಇನ್ನಿತರ ನೆಪವೊಡ್ಡಿ




ಮುಂದೂಡುತ್ತಲೇ ಬರಲಾಗಿತ್ತು. ಆದರೆ ಈ ಬಾರಿ ಸ್ಪಷ್ಟ ಆದೇಶ ನೀಡಿರುವ ನ್ಯಾಯಾಲಯವು ಪ್ರಜಾಪ್ರಭುತ್ವ ವ್ಯವಸ್ಥೆಗೆ ಪೂರಕವಾಗಿರುವ ಸ್ಥಳಿಯ ಜನಪ್ರತಿನಿಧಿಗಳ ಆಯ್ಕೆ ಪ್ರಕ್ರಿಯೆಗೆ ಅಡ್ಡಿ ಸರಿಯಲ್ಲ ಎಂದು ಈ ಹಿಂದಿನ ಬಿಜೆಪಿ ಹಾಗೂ ಹಾಲಿ ಸದ್ಯದ ಕಾಂಗ್ರೆಸ್ ಸರಕಾರಕ್ಕೆ ಛಾಟಿ ಬೀಸಲಾಗಿತ್ತು.

ಸದ್ಯದ ವರ್ತಮಾನದ ಪ್ರಕಾರ ಲೋಕಸಭಾ ಚುನಾವಣೆಯ ಫಲಿತಾಂಶದ ಆಧಾರದ ಮೇಲೆ ಕಾಂಗ್ರೆಸ್ ಸರಕಾರ ತನ್ನ ಇಚ್ ಅಸಕ್ತಿ ಪ್ರದರ್ಶಿಸುವ ಸಾದ್ಯತೆಯಿದ್ದು ಎರಡಂಕಿ ಸ್ಥಾನದ ಸಂಸದರು ರಾಜ್ಯದಿಂದ ಆಯ್ಕೆಯಾದಲ್ಲಿ ಆಗಷ್ಟ್ ತಿಂಗಳಲ್ಲೇ ಸ್ಥಳಿಯ ಸಂಸ್ಥೆ ಚುನಾವಣೆ ಘೋಷಣೆಯಾಗುವ ಸಾದ್ಯತೆ ಇದ್ದು ಎರಡಂಕಿ ಸಂಸದರ ಆಯ್ಕೆ ಒಂದು ವೇಳೆ ಆಗದೇ ಇದ್ದಲ್ಲಿ ಮೊತ್ತೊಂದು ಕುಂಟುನೆಪು ಹೇಳಿ ಚುನಾವಣೆಯನ್ನು ಬರುವ ಅಕ್ಟೋಬರ್ ಅಂತ್ಯಕ್ಕೆ ನಡೆಸುವ ಸಾದ್ಯತೆ ಇದೆ ಎಂದು ಮೂಲಗಳು ತಿಳಿಸಿವೆ.

ಧಾರವಾಡ ಜಿಲ್ಲೆಯ ನವಲಗುಂದ 4,ಅಣ್ಣೀಗೇರಿ 2, ಕುಂದಗೋಳ 5, ಕಲಘಟಗಿ 4,ಅಳ್ನಾವರ 2, ಧಾರವಾಡ 6 ಹುಬ್ಬಳ್ಳಿ 5,ಜಿ.ಪಂ.ಕ್ಷೇತ್ರಗಳು ಉದಯವಾಗಲಿವೆ ಎಂದು ತಿಳಿದು ಬಂದಿದೆ.

ಈ ಹಿನ್ನಲೆಯಲ್ಲಿ ಕಾಂಗ್ರೆಸ್, ಬಿಜೆಪಿ ಪಕ್ಷಗಳೆರೆಡರಲ್ಲೂ ರಾಜಕೀಯ ಚಟುವಟಿಕೆ ಕಾಣಿಸಿಕೊಂಡಿದೆ. ಅನೇಕರು ಮೀಸಲಾತಿ,ಕ್ಷೇತ್ರವಿಂಗಡನೆಯ ಗೆಜೆಟ್ ಪ್ರಕಟಣೆಯನ್ನು ಎದುರು ನೋಡತೊಡಗಿದ್ದಾರೆ. ಇಗಿನಿಂದಲೇ ಹಲವರು ನಮ್ಮ ಕ್ಷೇತ್ರಕ್ಕೆ ಇಂಥದ್ದೇ ಮೀಸಲಾತಿ ಬರಲಿದೆ ಎಂದು ಲೆಕ್ಕ ಹಾಕಲು ಪ್ರಾರಂಭಿಸಿದ್ದು ಜೂನ್,4,ರ ಲೋಕಸಭಾ ಫಲಿತಾಂಶವು ಇದಕ್ಕೆ ಪೂರಕವಾಗಲಿದೆ.

ಒಟ್ಟಾರೆ ಸ್ಥಳಿಯ ಸಂಸ್ಥೆಗಳ ಬಗ್ಗೆ ನಿರಾಸಕ್ತಿ ಹೊಂದಿದ್ದ ಅನೇಕರಿಗೆ ನ್ಯಾಯಾಲಯದ ಆದೇಶ ಹಾಗೂ ಇದಕ್ಕೆ ಸಂಭಂದಿಸಿದಂತೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನೀಡುತ್ತಿರುವ ಹೇಳಿಕೆಯು ಭಾರೀ ಮಹತ್ವ ಪಡೆದುಕೊಂಡಿದ್ದಂತೂ ಸುಳ್ಳಲ್ಲ.

––– ವೀರೇಶ ಪ್ರಳಯಕಲ್ಮಠ

MUNJANEVARTHE KANNADA DAILY, EDITOR, PRINTER PUBLISHED And OWNED BY H.L.Amaranth, and Printed at: Sree Manjunatha enterprises, No.30Subbannachan Lane 1st Cross, Cottenpet Bangalore-560053, MOB: 91414 14119 Published at: No.97, 2nd Cross, Vivekananda Nagar, Khadi commision layout, BSK 3rd Stage, Katharaguppe Main Road, Bangalore 560085